ಖಾಸಗಿ ಪ್ರಸಾರ



# ಶ್ರೀದೇವಿ ಅಂತರಂಗ

ಸೇವೆ - ಶಿಕ್ಷಣ - ಅಧ್ಯಾತ್ಮದ ಜೊತೆಗೆ ಪಯಣ

ಮಾಸಪತ್ರಿಕೆ
ಸಂಪುಟ 2, ಸಂಚಿಕೆ 12, ಅಕ್ಟೋಬರ್ 2024
SHRIDEVI ANTARANGA
Monthly Magazine




SHRIDEVI
EDUCATION

ಸಂಪಾದಕರು: ಡಾ. ಎಂ.ಆರ್. ಹುಲಿನಾಯ್ಕರ್ ಗೌರವ ಸಂಪಾದಕರು: ಡಾ. ಕೆ.ಆರ್.ಕಮಲೇಶ್ ಕಾರ್ಯನಿರ್ವಾಹಕ ಸಂಪಾದಕರು: ಡಾ. ರಮಣ ಎಂ. ಹುಲಿನಾಯ್ಕರ್



ಸಂಪಾದಕರ ಅಂತರಂಗ

ಡಾ. ಎಂ.ಆರ್. ಹುಲಿನಾಯ್ಕರ್
ಸಂಸ್ಥಾಪಕ ಅಧ್ಯಕ್ಷರು
ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಸಮೂಹ

## ದೇಶದ ಪರಿಸ್ಥಿತಿಯನ್ನು ಕುರಿತು ಚಿಂತಿಸಿದರೆ ಆಘಾತ ಖಂಡಿತ



### ಅಧಿಕಾರಕ್ಕಾಗಿ ಹಪಾಹಪಿ

ಅಕ್ಟೋಬರ್ 2ನೆಯ ತಾರೀಖಿನಂದು ನಮ್ಮ ರಾಜಕಾರಣಿಗಳಿಗೆ ಹಬ್ಬ. ಬಿಳಿಯ ಟೋಪಿ ಧರಿಸಿ ಮಹಾತ್ಮರ ಬಗ್ಗೆ ಪುಂಖಾನುಪುಂಖವಾಗಿ ಭಾಷಣ ಮಾಡುತ್ತಾ ಜನರನ್ನು ಮರಳುಮಾಡುವ ಮಂದಿ ಇವರು. ಇಂಥವರ ಅಂತರಂಗದಲ್ಲಿ ಬೇರೆಯದೇ ವಿಚಾರಗಳು ನಡೆದಿರುತ್ತದೆ. ಇಂದಿನ ನಮ್ಮ ದೇಶದ ದುಃಸ್ಥಿತಿಗೆ ಇವರ ಕೊಡುಗೆ ಅಪಾರ.

ತಾವು ಮತ್ತು ತಮ್ಮ ಪಕ್ಷ ಅಧಿಕಾರ ಪಡೆಯಲು ಹಾಗೂ ಪಡೆದ ಅಧಿಕಾರದಿಂದ ಹಣ ಸಂಪಾದನೆಮಾಡಲು ಇವರು ಎಂತಹ ಕೆಲಸವನ್ನಾದರೂ ಮಾಡಲು ಸಿದ್ಧರಿರುತ್ತಾರೆ. ರಾಜ್ಯ–ರಾಜ್ಯಗಳ ನಡುವೆ, ಧರ್ಮ–ಧರ್ಮಗಳ ನಡುವೆ, ಜಾತಿ–ಜಾತಿಗಳ ನಡುವೆ ಮತ್ತು ವ್ಯಕ್ತಿಗಳ ನಡುವೆ ದ್ವೇಷವನ್ನು ಬಿತ್ತಿ ಸ್ವಾರ್ಥವನ್ನು ಸಾಧಿಸಿಕೊಳ್ಳುವುದರಲ್ಲಿ ಈ ರಾಜಕಾರಣಿಗಳು ನಿಸ್ಸೀಮರು. ನಿರಂತರವಾಗಿ ಅಧಿಕಾರ ಪಡೆಯಲು ಕುಟಿಲೋಪಾಯಗಳನ್ನು ಹೆಣೆಯುವ ಕಾರ್ಯದಲ್ಲಿ ಇವರು ಸದಾ ಮಗ್ನರು. ಅವರಿಗೆ ದೇಶದ ಜನಸಾಮಾನ್ಯರ ಮತ್ತು ದೇಶದ ಹಿತ ಮುಖ್ಯವಾಗುವುದಿಲ್ಲ. ಅಧಿಕಾರ ಪಡೆಯುವುದಷ್ಟೇ ಅವರ ಏಕೈಕ ಗುರಿ.

### ಗ್ರಾಮೀಣ ಭಾರತದಲ್ಲಿ ನಿರುದ್ಯೋಗ

ಭಾರತದಲ್ಲಿ 700 ಮಿಲಿಯನ್ ಜನ ಗ್ರಾಮೀಣ ಪ್ರದೇಶಗಳಲ್ಲಿ ವಾಸವಾಗಿದ್ದಾರೆ. ಅವರ ಕುಟುಂಬದ ದಿನದ ಆದಾಯ 165 ರೂ. ಗಳಿಗಿಂತ ಕಡಿಮೆ ಇದೆ. ಅಂತಹ ಕುಟುಂಬಗಳಿಗೆ ಯಾವುದೇ ಭದ್ರತೆಯಿಲ್ಲ. ಆರೋಗ್ಯ, ಶಿಕ್ಷಣ, ವಸತಿ ಅಥವಾ ಇನ್ನಾವುದೇ ಮೂಲಭೂತ ಸೌಕರ್ಯಗಳ ಹಾಗೂ ಉದ್ಯೋಗಾವಕಾಶಗಳ ವಿಷಯದಲ್ಲಿ ಇವರು ದುರದೃಷ್ಟವಂತರು. ಇವರು ಮಾಡುವ ಕೆಲಸಕ್ಕೆ ದೊರೆಯುವ ವೇತನ ಕಡಮೆ. ಗ್ರಾಮೀಣ ಪ್ರದೇಶದಲ್ಲಿ ತಾಯಿ ಮತ್ತು ಮಗುವಿನ ಆರೋಗ್ಯದ ರಕ್ಷಣೆ ಹೊತ್ತ ಅಂಗನವಾಡಿಯ ನೌಕರರೂ ಶೋಷಣೆಗೊಳಗಾಗಿದ್ದಾರೆ.

▶▶ 2ನೇ ಪುಟಕ್ಕೆ...

# ಕ್ವಿನ್ ಸಿಟಿ (KWIN CITY)




“ಜ್ಞಾನವನ್ನಾಧರಿಸಿದ ಆರ್ಥಿಕತೆಯ ವಿಷಯದಲ್ಲಿ ನಮ್ಮ ರಾಜ್ಯವು ಭಾರತದಲ್ಲಿ ಯಾವಾಗಲೂ ಪ್ರಥಮಶ್ರೇಣಿಯಲ್ಲಿ ಮುಂದುವರಿಯುತ್ತಾ ಬಂದಿದೆ. ಯೋಜಿತ ಕ್ವಿನ್ ಸಿಟಿಯು, ಕರ್ನಾಟಕವಷ್ಟೇ ಅಲ್ಲದೆ ಇಡೀ ಭಾರತದಲ್ಲಿ, ಅಭಿವೃದ್ಧಿಗೆ ಹೊಸಭಾಷ್ಯವನ್ನೇ ಬರೆಯಲಿದೆ. ಇಂದು ಇರುವ ಬೇಡಿಕೆಗಳಿಗೆ ಅನುಸಾರವಾಗಿ ಜಾಗತಿಕ ಸಹಭಾಗಿತ್ವ ಮತ್ತು ನಾವೀನ್ಯಗಳಿಗೆ ಹೆಚ್ಚಿನ ಒತ್ತನ್ನು ನೀಡುತ್ತಾ, ಈ ನಗರವು ಎಲ್ಲಾ ಸೌಲಭ್ಯಗಳನ್ನು ಒಳಗೊಂಡಿರುತ್ತದೆ.”

– ಸಿದ್ಧರಾಮಯ್ಯ
ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ರಾಜ್ಯ.



■ ಬಿ.ಎಸ್. ವೆಂಕಟೇಶ ಪ್ರಸಾದ್
ಹಿರಿಯ ಪತ್ರಕರ್ತರು

### ಕರ್ನಾಟಕದಲ್ಲಿ ಸುಸ್ಥಿರ ಅಭಿವೃದ್ಧಿ ಮತ್ತು ಆಧುನಿಕ ಶೈಲಿಯ ಜೀವನಕ್ಕಾಗಿ ಕ್ವಿನ್ ಸಿಟಿ

ಕರ್ನಾಟಕ ಸರ್ಕಾರವು ದೂರದೃಷ್ಟಿಯಿಂದ ತನ್ನ ಮಹತ್ವಾಕಾಂಕ್ಷೆಯ ಯೋಜನೆಯಾದ ಕ್ವಿನ್ ಸಿಟಿಯ ಸ್ಥಾಪನೆಗೆ (KWIN City -Knowledge, Wellbeing, and Innovation City) ಇತ್ತೀಚೆಗೆ ಒಂದು ನಿದಿಷ್ಟವಾದ ದಿಕ್ಕನ್ನು ನೀಡಿದೆ. ನಗರ ಪ್ರದೇಶದ ಯೋಜನೆ ಮತ್ತು ಅಭಿವೃದ್ಧಿಂಪತ್ರಕರ್ತರುಯು ನಿಟ್ಟಿನಲ್ಲಿ ಹೊಸ ಮಾನದಂಡವನ್ನು ನೀಡುವ ಗುರಿಯನ್ನು ಹೊಂದಿರುವ ಈ ನಗರದ ನಿರ್ಮಾಣಕ್ಕೆ ರಾಜ್ಯದ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯನವರು ಚಾಲನೆಯನ್ನು ನೀಡಿದರು. ಇದರ ಕನಸನ್ನು ಕಂಡು, ಇದರ ನಿರ್ಮಾಣದ ಕರ್ಣಧಾರತ್ವವನ್ನು ಶ್ರೀ ಸಿದ್ಧರಾಮಯ್ಯನವರ ಜೊತೆಗೆ ಹೆಗಲೆಣೆಯಾಗಿ ನಿಂತು ನಡೆಸುತ್ತಿರುವವರು ಮೂಲಭೂತ ಸೌಕರ್ಯಗಳು ಮತ್ತು ದೊಡ್ಡ ಕೈಗಾರಿಕೆಗಳ ಸಚಿವರಾಗಿರುವ ಶ್ರೀ ಎಂ.ಬಿ. ಪಾಟಿಲ್ ಅವರು. ಈ ಪ್ರಯತ್ನವು ಸುಸ್ಥಿರ ಅಭಿವೃದ್ಧಿ, ಆವಿಷ್ಕಾರ ಮತ್ತು ಜಾಗತಿಕ ಸಹಯೋಗಗಳನ್ನು ದೃಷ್ಟಿಯಿಂದ ಕೂಡಿರಬೇಕೆಂಬ ಮುಂದಾಲಾಚನೆಯನ್ನು ಹೊಂದಿದೆ. ಡಾಬಸ್‌ಪೇಟೆ ಮತ್ತು ದೊಡ್ಡಬಳ್ಳಾಪುರಗಳ ನಡುವೆ, ಉಪನಗರದ ವರ್ತುಲ ರಸ್ತೆಗೆ ಸಮೀಪದಲ್ಲಿ ತಲೆಯೆತ್ತುತ್ತಿರುವ ಈ ಕ್ವಿನ್ ಸಿಟಿಯು ಮುಂದಿನ ದಿನಗಳಲ್ಲಿ ಭಾರತದ ನಗರನಿರ್ಮಾಣದಲ್ಲಿಯೇ ಒಂದು ಮಾದರಿ ನಗರವಾಗಲಿದೆ.

### ಭವಿಷ್ಯದ ವಿಶಿಷ್ಟ ದೃಷ್ಟಿಕೋನ:

ಸಾರ್ವಜನಿಕ ಮತ್ತು ಖಾಸಗೀ ಪಾಲುದಾರಿಕೆಯಲ್ಲಿ ಅಭಿವೃದ್ಧಿಯನ್ನು ಹೊಂದುವ ಈ ಕ್ವಿನ್ ಸಿಟಿಯು ‘ಸುಸ್ಥಿರವಾದ ಜೀವನದೊಂದಿಗೆ ಅಭಿವೃದ್ಧಿ’ ಎಂಬ ತತ್ತ್ವವನ್ನು ತನ್ನ ಧ್ಯೇಯವನ್ನಾಗಿ ಹೊಂದಿದೆ. ಈ ನಗರಕ್ಕೆ ಚಾಲನೆಯನ್ನು ನೀಡಿದ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯ ಅವರು, ಇದು ಜ್ಞಾನ, ಆರೋಗ್ಯ, ಸಂಶೋಧನೆ ಮತ್ತು ಆವಿಷ್ಕಾರಗಳ ಸಂಗಮವಾಗಿರುತ್ತದೆ ಎಂಬ ಅಂಶವನ್ನು ಒತ್ತಿಹೇಳಿದರು. ಈ ಅಂಶಗಳು ಕ್ವಿನ್ ಸಿಟಿಯು ವಿಶ್ವದರ್ಜೆಯ ಗುಣಮಟ್ಟದ ಮೂಲಭೂತ ಸೌಕರ್ಯಗಳನ್ನು ಹೊಂದಿರುವುದು ಮಾತ್ರವಲ್ಲದೆ, ಆತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಪರಿಸರದ ಸಮತೋಲನವನ್ನು ಕಾಪಾಡಿಕೊಳ್ಳಬಲ್ಲ ಸುಸ್ಥಿರ ಅಭಿವೃದ್ಧಿಯ ಜಾಗತಿಕ ಕೇಂದ್ರವಾಗಿ ಹೊಮ್ಮುವ ಗುರಿಯನ್ನೂ ಹೊಂದಿದೆ.

ಈ ನಗರವು ಪ್ರಾರಂಭದಲ್ಲಿ 2,000 ಎಕರೆಯಷ್ಟು ಪ್ರದೇಶದಲ್ಲಿ ತಲೆಯೆತ್ತುತ್ತಿದ್ದರೂ, ಅನಂತರದ ದಿನಗಳಲ್ಲಿ 5,800 ಎಕರೆಗಳಿಗೆ ವಿಸ್ತರಿಸಲ್ಪಡುವ ಅವಕಾಶವನ್ನು ಹೊಂದಿದೆ. 5 ಲಕ್ಷಜನರಿಗೆ ವಸತಿ ಸೌಕರ್ಯವನ್ನು ಒದಗಿಸುವ ಈ ನಗರವು ಭಾರತದಲ್ಲಿಯೇ ಅತ್ಯಂತ ಆಧುನಿಕ ರೀತಿಯಲ್ಲಿ ಯೋಜಿಸಲ್ಪಟ್ಟ ನಗರವಾಗಲಿದೆ. ಕ್ವಿನ್ ಸಿಟಿಯ ಒಂದು ಪ್ರಮುಖ ಲಕ್ಷಣವೆಂದರೆ, ಇದು ವ್ಯಾಪಕವಾಗಿ ಹಸಿರು ಗಿಡಮರಗಳನ್ನು ಮತ್ತು ಉತ್ತಮ ಮೂಲಭೂತ ಸೌಕರ್ಯಗಳನ್ನು ಹೊಂದಿರುವುದು.

▶▶ 6ನೇ ಪುಟಕ್ಕೆ...

### ಕ್ವಿನ್ ಸಿಟಿಯ ವೈಶಿಷ್ಟ್ಯಗಳು

- ಈ ನಗರವು ಐದು ಲಕ್ಷ ಜನರಿಗೆ ನೆಲಸಲು ಅವಕಾಶವನ್ನು ಒದಗಿಸುವಂತೆ ರೂಪಗೊಳ್ಳುತ್ತಿದೆ.
- ತಜ್ಞರ ನೆರವಿನಿಂದ ಇದನ್ನು ಸಾಂಸ್ಕೃತಿಕ ಮತ್ತು ಪಾರಂಪರಿಕ ನಗರವನ್ನಾಗಿ ಮಾಡಲಾಗುವುದು.
- ನೀರು ಹರಿದುಹೋಗುವುದನ್ನು ತಡೆಗಟ್ಟಲು ನೀರನ್ನು ಹೀರಿಕೊಳ್ಳುವಂತಹ ಸಾಮಗ್ರಿಗಳನ್ನು ಬಳಸಲಾಗುವುದು.
- ವಿದ್ಯುತ್ತಿನಲ್ಲಿ ಸ್ವಾವಲಂಬನೆಯನ್ನು ಹೊಂದಲು, 465 ಎಕರೆ ಪ್ರದೇಶದಲ್ಲಿ 0.69 ಮೆಗಾವ್ಯಾಟ್ ಸಾಮರ್ಥ್ಯದ ಸೌರವಿದ್ಯುತ್ ಸ್ಥಾವರವನ್ನು ಈ ನಗರವು ಒಳಕೊಂಡಿರುತ್ತದೆ.
- ಒಂದು ಹನಿ ನೀರೂ ವ್ಯರ್ಥವಾಗದಂತೆ ಅದನ್ನು ಬಳಸಿಕೊಳ್ಳಲು, ಮಳೆನೀರಿನ ಇಂಗುಗುಂಡಿಗಳನ್ನು ನಿರ್ಮಿಸಲು ಸಮಗ್ರ ಯೋಜನೆಯು ಇಲ್ಲಿ ಆದ್ಯತೆಯ ಮೇಲೆ ಕಾರ್ಯಗತವಾಗಲಿದೆ.
- ಬಳಸಿದ ನೀರನ್ನು ಪುನರ್ಬಳಕೆ ಮಾಡುವ ವ್ಯವಸ್ಥೆಯ ಮೂಲಕ ಈ ನಗರಕ್ಕೆ ಅಗತ್ಯವಾಗಿರುವ ಪ್ರಮಾಣದಲ್ಲಿ ಶೇ. 50 ರಿಂದ 70ರಷ್ಟನ್ನು ಒದಗಿಸಲಾಗುವುದು.
- ಶೇ.40ರಷ್ಟು ಪ್ರದೇಶವನ್ನು ಕೆರೆಗಳಿಗಾಗಿ, ಮರಗಿಡಗಳನ್ನು ಬೆಳೆಸುವುದಕ್ಕಾಗಿ ಹಾಗೂ ಮುಕ್ತ ಪ್ರದೇಶವಕ್ಕಾಗಿ ಮೀಸಲಾಗಿಡಲಾಗುವುದು.
- ಪರಿಸರ ಸಂರಕ್ಷಣೆಯ ದೃಷ್ಟಿಯಿಂದ ನಗರದಲ್ಲಿ ಬೈಸಿಕಲ್ ಮತ್ತು ಮೊಟಾರ್ ಬೈಕ್‌ಗಳಿಗಾಗಿ ಪ್ರತ್ಯೇಕ ಮಾರ್ಗವನ್ನು ನಿರ್ಮಿಸಲಾಗುವುದು.
- ಇದಲ್ಲದೆ, ನಗರದಲ್ಲಿ ಯಾವುದೇ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ 15 ನಿಮಿಷಗಳೊಳಗೆ ಹೋಗಲು ಅನುಕೂಲವಾಗುವಂತೆ, ಮಾನೋ ರೈಲಿನ ವ್ಯವಸ್ಥೆಯಿರಲಿದೆ.
- ನಗರದ ಒಳಭಾಗದಲ್ಲಿ 200 ಎಕರೆ ಪ್ರದೇಶದಲ್ಲಿ ತೋಟವನ್ನು ನಿರ್ಮಿಸಿ, ಅಲ್ಲಿ ವಾರ್ಷಿಕವಾಗಿ 7,000 ಟನ್‌ಗಳಷ್ಟು ತರಕಾರಿ ಹಾಗೂ ಹಣ್ಣುಗಳನ್ನು ಬೆಳೆಯಲಾಗುವುದು.
- ತ್ಯಾಜ್ಯಗಳನ್ನು ವಿಲೇವಾರಿ ಮಾಡಲು ಅತ್ಯಾಧುನಿಕ ವಿಧಾನಗಳನ್ನು ಬಳಸಿಕೊಳ್ಳಲಾಗುವುದು.
- ಕ್ವಿನ್ ಸಿಟಿಯಲ್ಲಿ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಕಾರ್ಯಕ್ರಮಗಳನ್ನು ನಡೆಸಲು ಸುಸಜ್ಜಿತ ವ್ಯವಸ್ಥೆಯನ್ನು ಮಾಡಲಾಗುವುದು.

# ದೇಶದ ಪರಿಸ್ಥಿತಿಯನ್ನು ಕುರಿತು ಚಿಂತಿಸಿದರೆ ಆಘಾತ ಖಂಡಿತ

▸▸ ಮೊದಲನೇ ಪುಟದಿಂದ

ಪ್ರಸ್ತುತ ಭಾರತದಲ್ಲಿ ಸರ್ಕಾರಗಳು ಸರ್ಕಾರಿ ಮತ್ತು ಸಾರ್ವಜನಿಕ ಕ್ಷೇತ್ರದಲ್ಲಿ ಕೆ.ಎ.ಎಸ್, ಐ.ಎ.ಎಸ್ ಹಾಗೂ ಐ.ಪಿ.ಎಸ್ ಹುದ್ದೆಗಳನ್ನು ನಿರಂತರವಾಗಿ ಭರ್ತಿಮಾಡುತ್ತಾ ಕೆಳಹಂತದ ಹುದ್ದೆಗಳಿಗೆ ಜನರನ್ನು ದಿನಗೂಲಿ ಆಧಾರದಲ್ಲಿ ತೆಗೆದುಕೊಳ್ಳುತ್ತಿವೆ. ಸ್ವಾತಂತ್ರ್ಯಾನಂತರದ ಭಾರತದಲ್ಲಿ ಜೀತಪದ್ಧತಿ ರದ್ದಾಗಿದ್ದರೂ ಈಗಿನ ಸರ್ಕಾರಿ ನೌಕರರಲ್ಲಿ ಆ ಪದ್ಧತಿಯು ಹಲವು ರೂಪಗಳಲ್ಲಿ ಇನ್ನೂ ಜೀವಂತವಾಗಿದೆ. ಕೆಳಹಂತದ ನೌಕರಿಗಳು ಭರ್ತಿಯಾದರೆ ಗ್ರಾಮೀಣ ಪ್ರದೇಶದ ಜನರಿಗೆ ಸ್ವಲ್ಪಮಟ್ಟಿನ ಉದ್ಯೋಗ ದೊರೆಯುತ್ತದೆ.

ಜಾಗತೀಕರಣದ ನೀತಿಯು ಜಾರಿಯಾದ ಅನಂತರ ಸರ್ಕಾರಗಳು ತಮ್ಮ ನೌಕರರ ಸಂಖ್ಯೆಯನ್ನು ಕಡಿಮೆಮಾಡುತ್ತಾ ಬರುತ್ತಿವೆ. ರಾಜ್ಯಗಳಲ್ಲಿ ಬಂಡವಾಳ ಹೂಡುವ ವಿದೇಶಿ ಕಂಪನಿಗಳು ತಮ್ಮ ಸಂಸ್ಥೆಗಳಿಗೆ ಕಾರ್ಮಿಕ ಕಾಯಿದೆಗಳು ಅನ್ವಯವಾಗಬಾರದು ಎಂದಾಗ ಇದಕ್ಕೆ ಎಲ್ಲ ಸರ್ಕಾರಗಳೂ ಸಮ್ಮತಿಸಿದವು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕಾರಣಿಗಳು ಜನರ ಪರವಾಗಿ ಚಿಂತಿಸಬೇಕು. ಜನರ ಜೀವನಮಟ್ಟವನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸಬೇಕು. ಆದರೆ ಇಂದು ರಾಜಕಾರಣಿಗಳು ಸಿದ್ಧಾಂತದ ಮೇಲೆ ಮತ ಕೇಳುವುದರ ಬದಲು ಜನರನ್ನು ಒಡೆದು ಮತಗಳನ್ನು ಪಡೆಯಲು ಮುಂದಾಗುತ್ತಾರೆ. ಅದನ್ನು ಪ್ರಶ್ನೆಮಾಡಿದರೆ 'ಇದು ಗಾಂಧಿಕಾಲ ಅಲ್ಲ, ಗಾಂಧಿ ಈಗ ಜನಿಸಿದ್ದಿದ್ದರೂ ಆತ ಸಹ ಹಣ ವೆಚ್ಚ ಮಾಡದೇ ಚುನಾವಣೆಯನ್ನು ಗೆಲ್ಲಲು ಸಾಧ್ಯವಾಗುತ್ತಿರಲಿಲ್ಲ' ಎಂದು ಹೇಳಿ ತಮ್ಮನ್ನು ಸಮರ್ಥಿಸಿಕೊಳ್ಳುತ್ತಾರೆ.

ಇದು ವಾಸ್ತವ. ಜನರು ಜಾತಿ, ಧರ್ಮ ಮತ್ತಿತರ ಭಾವನಾತ್ಮಕ ವಿಚಾರಗಳಿಂದಾಗಿ ವಿಘಟನೆಯತ್ತ ಸಾಗುತ್ತಿದ್ದಾರೆ. ಸಮಾಜದಲ್ಲಿ ಅನ್ಯಾಯ ನಡೆಯುತ್ತಿದ್ದರೂ ಅವರು ತಲೆಕೆಡಿಸಿಕೊಳ್ಳುವುದಿಲ್ಲ. ತಮ್ಮ ಜಾತಿ ಮತ್ತು ಧರ್ಮವನ್ನು ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಳ್ಳುತ್ತಿದ್ದಾರೆ. ಜನತೆಯ ಈ ದೌರ್ಬಲ್ಯವನ್ನು ರಾಜಕಾರಣಿಗಳು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಅವರು ದೊರೆತ ಅಧಿಕಾರ ತಮಗೆ ಮಾತ್ರವಲ್ಲದೆ ತಮ್ಮ ವಂಶದವರಿಗೆ ಹಾಗೂ ಬಂಧುಗಳಿಗೆ ದೊರಕಿಸಿಕೊಡುವ ಹುನ್ನಾರದಲ್ಲಿರುತ್ತಾರೆ. ಪ್ರಶ್ನೆ ಮಾಡಿದವರನ್ನು 'ಜಾತಿವಾದಿ' ಎಂದು ದೂಷಿಸುತ್ತಾರೆ. ಇದು ನಮ್ಮ ದೌರ್ಭಾಗ್ಯ.

ಇಂತಹ ಸಂದರ್ಭದಲ್ಲಿ ನಾವು ಭಾರತದ ಸ್ವಾತಂತ್ರ್ಯ ಹೋರಾಟಕ್ಕಾಗಿ ಶ್ರಮಿಸಿದವರಲ್ಲಿದ್ದ ಮೌಲ್ಯಗಳನ್ನು ಜ್ಞಾಪಿಸಿಕೊಳ್ಳಬೇಕು. ಭಾರತದ ಸ್ವಾತಂತ್ರ್ಯ ಹೋರಾಟವು ಕೇವಲ ದೇಶವೊಂದು ಪರಕೀಯರ ಆಳ್ವಿಕೆಯಿಂದ ಮುಕ್ತಗೊಳ್ಳಲು ನಡೆಸಿದ ಹೋರಾಟವಲ್ಲ, ಅದು ಜಗತ್ತಿಗೆ ಅನೇಕ ಕೊಡುಗೆಗಳನ್ನು ನೀಡಿದೆ ಇತರ ದೇಶಗಳಲ್ಲಿನ ಹೋರಾಟ್ರಕ್ಕೆ ಮಾರ್ಗದರ್ಶನ ನೀಡಿದೆ.

### ಭಾರತ ಮತ್ತು ಜಗತ್ತಿಗೆ ಹೊಸ ಮೌಲ್ಯಗಳು

ಇಂತಹ ಹೋರಾಟದ ಮುಂಚೂಣಿಯಲ್ಲಿದ್ದವರು ಮಹಾತ್ಮ ಗಾಂಧೀಜಿ (ಜನನ ಅಕ್ಟೋಬರ್ 2. 1869. ಮರಣ ಜನವರಿ 30. 1948). ಮಹಾತ್ಮ ಗಾಂಧೀಜಿಯವರ ತ್ಯಾಗಮಯ ಬದುಕನ್ನು ಒಮ್ಮೆ ಅವಲೋಕಿಸಿದರೆ ಎಂಥ ಪರಿಶ್ರಮ ಹಾಗೂ ತ್ಯಾಗದಿಂದ ನಾವು ಸ್ವಾತಂತ್ರವನ್ನು ಪಡೆದಿದ್ದೇವೆ ಎನ್ನುವುದು ಮನವರಿಕೆಯಾಗುತ್ತದೆ. ಮಹಾತ್ಮಾ ಗಾಂಧೀಜಿಯವರು ವಕೀಲರು, ರಾಜಕೀಯ ಚಿಂತಕರು, ಸಾಮಾಜಿಕ ಕಾರ್ಯಕರ್ತರು, ಬರಹಗಾರರು, ಸ್ವಾತಂತ್ರ ಹೋರಾಟಗಾರರು ಎಂಬುದಾಗಿ ಇತಿಹಾಸದಲ್ಲಿ ಗುರುತಿಸಲ್ಪಟ್ಟಿದ್ದಾರೆ.



ಮಹಾತ್ಮ ಗಾಂಧೀಜಿ ಭಾರತಕ್ಕೆ ಸ್ವಾತಂತ್ರ್ಯ ತಂದು ಕೊಟ್ಟಿದ್ದರಿಂದಷ್ಟೇ ದೊಡ್ಡವರಾಗಲಿಲ್ಲ. ಅವರು ಸೂರ್ಯ ಮುಳುಗದ ಸಾಮ್ರಾಜ್ಯದ ಅಧಿಪತಿಗಳಾಗಿದ್ದ ಬ್ರಿಟಿಷರ ವಿರುದ್ಧ ಶಸ್ತ್ರಗಳನ್ನು ಹಿಡಿಯದೆ ನಡೆಸಿದ ಅಹಿಂಸಾತ್ಮಕ ಹೋರಾಟ ಜಗತ್ತಿನ ಚರಿತ್ರೆಯಲ್ಲಿ ಹೊಸ ಅಧ್ಯಾಯವೊಂದನ್ನು ತೆರೆಯಿತು. ಆ ಸಮಯದಲ್ಲಿ ಬ್ರಿಟಿಷರ ಮಿಲಟರಿ ಪ್ರಾಬಲ್ಯವನ್ನು ಮೀರಿಸುವಂತಹವರು ಯಾರೂ ಇರಲಿಲ್ಲ. ಪ್ರಪಂಚದ ಬಹುಮಟ್ಟಿನ ದೇಶಗಳು ಅವರ ಆಳ್ವಿಕೆಗೊಳಪಟ್ಟಿದ್ದವು. ಇಂತಹ ಸಂದರ್ಭದಲ್ಲಿ ಮಹಾತ್ಮ ಗಾಂಧೀಜಿಯವರು ಭಾರತೀಯ ಸಂಸ್ಕೃತಿಯ ಕೆಲವು ಮೌಲ್ಯಗಳಾದ ಅಹಿಂಸೆ, ಸತ್ಯಾಗ್ರಹ, ಅಸಹಕಾರ ಹಾಗೂ ವೈಯಕ್ತಿಕ ನೈತಿಕತೆ, ದುಷ್ಟಶಕ್ತಿಗಳನ್ನು ನಿರಾಯುಧರಾಗಿ ಎದುರಿಸುವ ಮನೋದಾರ್ಢ್ಯ – ಇವುಗಳನ್ನು ಅಸ್ತ್ರಗಳನ್ನಾಗಿ ಬಳಸಿದರು.

ಮಹಾತ್ಮ ಗಾಂಧೀಜಿಯವರ ನಿಧನದ ಅನಂತರವೂ ಈ ಚಳವಳಿ ಮುನ್ನಡೆಯಿತು. ಅಮೆರಿಕದಲ್ಲಿ ಸಮಾನತೆಗಾಗಿ ಹೋರಾಟ ನಡೆಸಿದ ಮಾರ್ಟಿನ್ ಲೂಥರ್ ಕಿಂಗ್ (ಜೂನಿಯರ್), ದಕ್ಷಿಣ ಆಫ್ರಿಕಾದಲ್ಲಿ ಜನಾಂಗೀಯ ದ್ವೇಷದ ವಿರುದ್ಧ ಹೋರಾಟ ನಡೆಸಿದ ನೆಲ್ಸನ್ ಮಂಡೆಲಾ ಮತ್ತು ಮ್ಯಾನ್ಮಾರ್‌ನ ಆಂಗ್ ಸಾನ್ ಸೂ ಕಿ (Aung San Suu Kyi) ಮೊದಲಾದವರು ಮಹಾತ್ಮ ಗಾಂಧೀಜಿ ಅವರ ಮಾರ್ಗದಲ್ಲಿ ನಡೆದು ಯಶಸ್ಸನ್ನು ಪಡೆದರು. ಲೋಕನಾಯಕ ಜಯಪ್ರಕಾಶ್ ನಾರಾಯಣ ಅವರು ತುರ್ತು ಪರಿಸ್ಥಿತಿಯಲ್ಲಿ ಅಂದಿನ ಸರ್ಕಾರದ ವಿರುದ್ಧ ಹೋರಾಡಲು ಗಾಂಧಿಮಾರ್ಗವನ್ನು ಅನುಸರಿಸಿದ್ದರು.

ಅಸಾಧಾರಣ ಮನೋಧರ್ಮದ ಗಾಂಧೀಜಿ ತಮಗೆ ಮನವರಿಕೆಯಾದ ಸತ್ಯವನ್ನು ಹಿಂಜರಿಕೆಯಿಲ್ಲದೆ ಅನುಷ್ಠಾನಮಾಡುತ್ತಿದ್ದರು. 1888ರಲ್ಲಿ ಇಂಗ್ಲೆಂಡಿಗೆ ಹೋದ ಗಾಂಧೀಜಿ ಅಲ್ಲಿ 'ಸಸ್ಯಾಹಾರಿಗಳ ಸಂಘವನ್ನು' ಕಟ್ಟಿದರು. ಯುರೋಪ್‌ನಲ್ಲಿ ಸಸ್ಯಾಹಾರದ ಬಗ್ಗೆ ಮಾತನಾಡುವುದೇ ದೊಡ್ಡ ಅಪರಾಧವಾಗಿತ್ತು. 1893ರಲ್ಲಿ ದಕ್ಷಿಣ ಆಫ್ರಿಕಾಕ್ಕೆ ಹೋದ ಅವರು ಅಲ್ಲಿನ ಭಾರತೀಯರ ಪರವಾಗಿ ಹೋರಾಡಿ ಮಹಾನ್ ನಾಯಕರಾಗಿ ರೂಪಗೊಂಡರು. "ದ್ವೇಷವಿಲ್ಲದೆ ವಿರೋಧಿಸುವುದು ಮತ್ತು ಹಿಂಸೆಯನ್ನು ತ್ಯಜಿಸಿ ಹೋರಾಡುವುದು" ಅವರ ಸತ್ಯಾಗ್ರಹದ ಮುಖ್ಯ ಆಶಯವಾಗಿತ್ತು.

1914–15ರ ಅನಂತರ ಗಾಂಧೀಜಿ ಭಾರತದಲ್ಲಿ ತಮ್ಮ ಚಟುವಟಿಕೆಗಳನ್ನು ಪ್ರಾರಂಭಿಸಿದರು. ಚಂಪಾರಣ್ಯ ಚಳವಳಿ ಗಾಂಧೀಜಿಯವರ ಮೊದಲ ಚಳವಳಿಯಾಗಿತ್ತು. ಬ್ರಿಟಿಷರ ನೀತಿಯಿಂದಾಗಿ ಬಿಹಾರದ ಚಂಪಾರಣ್ಯದ ರೈತರು ಶೋಷಣೆಗೊಳಗಾಗಿದ್ದರು. ಬ್ರಿಟಿಷರ ವಿರುದ್ಧ ಬಹುದೊಡ್ಡ ಜನಾಂದೋಲನವನ್ನು ಗಾಂಧೀಜಿ ಪ್ರಾರಂಭಿಸಿದರು. ಗಾಂಧೀಜಿಯ ಹೋರಾಟಕ್ಕೆ ಬ್ರಿಟಿಷ್ ಸರ್ಕಾರ ಮಣಿಯಿತು.

### ನಮ್ಮ ಭಾಗದಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ

ಮಹಾತ್ಮ ಗಾಂಧೀಜಿಯವರು 1924ರಲ್ಲಿ ಬೆಳಗಾವಿಯಲ್ಲಿ ಜರುಗಿದ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾಗಿದ್ದರು. ಅದರ ಪ್ರಭಾವ ಮುಂಬೈ–ಕರ್ನಾಟಕದ ಮೇಲೆ ಗಣನೀಯವಾಗಿತ್ತು. ಪ್ರತಿಯೊಂದು ಗ್ರಾಮದಲ್ಲಿಯೂ ಗಾಂಧೀಜಿಯ ಸ್ವಯಂಸೇವಕರು ರೂಪಗೊಂಡಿದ್ದರು. ನಮ್ಮ ಗ್ರಾಮವೊಂದರಲ್ಲಿಯೇ ಮೂವರು ಸ್ವಾತಂತ್ರ್ಯ ಹೋರಾಟಗಾರರಿದ್ದರು. ಶುದ್ಧ ಖಾದಿಧಾರಿಗಳಾಗಿದ್ದ ಮತ್ತು ಸಾರ್ವಜನಿಕ ಕ್ಷೇತ್ರದಲ್ಲಿ ಉತ್ತಮ ಹೆಸರನ್ನು ಪಡೆದಿದ್ದ ಅವರಿಗೆ ಎಲ್ಲಾ ಸಮುದಾಯದ ಜನರೂ ಗೌರವ ಕೊಡುತ್ತಿದ್ದುದನ್ನು ನಾನೇ ಬಾಲ್ಯದಲ್ಲಿ ನೋಡಿದ್ದೇನೆ. ಇಂದು ದೇಶದಲ್ಲಿ ಅಂತಹ ತತ್ತ್ವಗಳಿಗೆ ಬದ್ಧರಾಗಿರುವ ನಾಯಕರು ಕಾಣಬರದಿರುವುದು ಅತ್ಯಂತ ವಿಷಾದಕರ ಸಂಗತಿಯಾಗಿದೆ.

ಮಹಾತ್ಮ ಗಾಂಧೀಜಿಯವರು ಸ್ವಾತಂತ್ರ್ಯ ಹೋರಾಟದ ಜೊತೆಗೇ ದೇಶದ ಜನತೆಯಲ್ಲಿ ರಾಷ್ಟ್ರೀಯತೆಯನ್ನು ಜಾಗೃತಗೊಳಿಸಿದುದು ವಿಶೇಷವಾದ ಸಂಗತಿ. ಬ್ರಿಟಿಷರ ವಿರುದ್ಧ ಅವರು ಹಮ್ಮಿಕೊಂಡ ಅಸಹಕಾರ ಚಳವಳಿ ಮತ್ತು ಉಪ್ಪಿನ ಸತ್ಯಾಗ್ರಹ ನಮ್ಮ ಇತಿಹಾಸದಲ್ಲಿ ಅತ್ಯಂತ ಪ್ರಮುಖವಾದ ಘಟನೆಗಳಾಗಿವೆ. ಜೊತೆಗೆ ಅವರು ಖಾದಿ ಉದ್ಯಮಕ್ಕೆ ಕೊಟ್ಟ ಪ್ರೋತ್ಸಾಹ, ಅಸ್ಪೃಶ್ಯತೆಯ ವಿರುದ್ಧ ನಡೆಸಿದ ಆಂದೋಲನ, ಮದ್ಯಪಾನದ ಬಗ್ಗೆ ಅವರ ಕಠೋರ ನಿಲುವು ಮತ್ತು ಸ್ತ್ರೀಯರ ವಿಚಾರದಲ್ಲಿ ಅವರಿಗಿದ್ದ ಗೌರವ ಮೊದಲಾದವು ಭಾರತೀಯರ ಜನಜೀವನದ ಮೇಲೆ ಗಾಢಪ್ರಭಾವ ಬೀರಿವೆ. ಅವರು ಸ್ವಾತಂತ್ರ್ಯ ಹೋರಾಟವನ್ನು ತಮ್ಮ ಸ್ವಾರ್ಥಕ್ಕೆ ಎಂದೂ ಬಳಸಿಕೊಳ್ಳಲಿಲ್ಲ. ಅವರ ಬದುಕು ಸ್ಫಟಿಕದಷ್ಟು ಪಾರದರ್ಶಕವಾಗಿತ್ತು.

### 21ನೆಯ ಶತಮಾನಕ್ಕೆ ಗಾಂಧೀಜಿಯವರ ಚಿಂತನೆಗಳ ಪ್ರಸ್ತುತತೆ

ಗಾಂಧೀಜಿಯವರ ಸ್ವಾರ್ಥರಹಿತ ಚಿಂತನೆಗಳು 21ನೇ ಶತಮಾನಕ್ಕೂ ಅಗತ್ಯವಿದೆ. ಅವರ ದೃಷ್ಟಿಕೋನಕ್ಕೆ ಅವರ ಒಂದು ಮಾತನ್ನು ಉದ್ಧರಿಸಬಹುದು. "ಹಸಿದ ಹೊಟ್ಟೆಗೆ ಉಪದೇಶ ಮುಖ್ಯ ಎನಿಸುವುದಿಲ್ಲ". ಮಹಾತ್ಮ ಗಾಂಧೀಜಿಯವರ ಈ ಮಾತು ಎಲ್ಲಾ ಆಡಳಿತಗಾರರಿಗೂ ಆದರ್ಶವಾಗಿರಬೇಕು. ಸ್ವಾತಂತ್ರ ಪಡೆದು 77 ವರ್ಷಗಳಾದರೂ ದೇಶದ ಶೇಕಡಾ 65ಕ್ಕೂ ಹೆಚ್ಚು ಜನರಿಗೆ ಉಚಿತ ಆಹಾರ ಪದಾರ್ಥಗಳನ್ನು ಕೊಡುತ್ತಿರುವುದು ಬಡತನ ನಿರ್ಮೂಲನೆಯಲ್ಲಿ ನಾವು ಎಷ್ಟು ವಿಫಲರಾಗಿದ್ದೇವೆ ಎಂಬುದನ್ನು ತೋರಿಸುತ್ತದೆ. ಭಾರತದಲ್ಲಿ ಸಂಪತ್ತಿನ ಸಮಾನ ವಿತರಣೆಮಾಡುವುದರಲ್ಲಿ ನಮ್ಮ ಆಡಳಿತ ವ್ಯವಸ್ಥೆ ಸೋತಿದೆ.

### ಮಹಾತ್ಮ ಗಾಂಧೀಜಿ ಅವರ ನಾಲ್ಕು ಸೂತ್ರಗಳು

ಮಹಾತ್ಮ ಗಾಂಧೀಜಿಯವರು ಪದೇ ಪದೇ ಪ್ರಸ್ತಾಪಿಸುತ್ತಿದ್ದ ನಾಲ್ಕು ಸೂತ್ರಗಳಲ್ಲಿ ಒಂದು ಭಾರತದ ಸಾಮಾಜಿಕ ಆರ್ಥಿಕ ಹಾಗೂ ಸಾರ್ವಜನಿಕ ಕ್ಷೇತ್ರಗಳಲ್ಲಿ ಮೌಲ್ಯಗಳು ಮುಖ್ಯವೆಂಬುದು. ಗಾಂಧೀಜಿ ಖಾದಿ ಉದ್ಯಮಕ್ಕೆ ಪ್ರೋತ್ಸಾಹ ಕೊಟ್ಟಿದ್ದರು. ಖಾದಿ ಉದ್ಯಮ ಸಣ್ಣ ಕೈಗಾರಿಕಾ ವಲಯದಲ್ಲಿ ಮಹತ್ವವನ್ನು ಹೊಂದಿದೆ. ಖಾದಿಗೆ ಬೆಂಬಲವೆಂದರೆ ಅಕ್ಟೋಬರ್ 2ರಂದು ಖಾದಿ ಬಟ್ಟೆಯನ್ನು ಧರಿಸುವುದಷ್ಟೇ ಅಲ್ಲ. ಬದಲಿಗೆ, ಬ್ರಿಟಿಷರು ಬರುವುದಕ್ಕೆ ಮುಂಚೆ ಹಲವು ದೇಶಗಳಿಗೆ ರಫ್ತನ್ನು ಮಾಡುತ್ತಿದ್ದ ಮತ್ತು ಕೋಟ್ಯಂತರ ಜನರಿಗೆ ನೇಕಾರಿಕೆಯಿಂದ ಬದುಕನ್ನು ಕಟ್ಟಿಕೊಳ್ಳುವ ಅವಕಾಶವನ್ನು ಒದಗಿಸುತ್ತಿದ್ದ ಬಟ್ಟೆ ಉದ್ಯಮವನ್ನು ಬೆಂಬಲಿಸುವುದು. ಆದರೆ ಇಂಗ್ಲೆಂಡಿನ ಹತ್ತಿಗಿರಣಿಗಳಿಗೆ ಕೆಲಸಕೊಡಲು ಬ್ರಿಟಿಷರು ನಮ್ಮ ದೇಶದ ಪ್ರಮುಖ ಉದ್ಯಮವಾಗಿದ್ದ ನೇಕಾರಿಕೆಯನ್ನು ಶಿಥಿಲಗೊಳಿಸಿದರು.

ಅದೇ ರೀತಿ ಅನೇಕ ಕೈಕಸಬುಗಳು ಭಾರತದ ಜನಜೀವನದ ಪ್ರಮುಖ ಅಂಗವೆಂಬುದನ್ನು ಮಹಾತ್ಮರು ಸಮರ್ಥವಾಗಿ ಮನಗಾಣಿಸಿದ್ದಾರೆ. ಸ್ವಾತಂತ್ರ್ಯಾನಂತರ ಭಾರತದ ಆಡಳಿತಗಾರರು ಅವರ ಪ್ರಮುಖ ಉದ್ದೇಶವನ್ನೇ ಸರಿಯಾಗಿ ಅರ್ಥಮಾಡಿಕೊಳ್ಳಲಿಲ್ಲ. ಈಗ ನಾವು ಯುವಜನಾಂಗಕ್ಕೆ 'ಕೌಶಲವನ್ನು' ಕಲಿಸಲು ಹೊರಟಿದ್ದೇವೆ. ಶಿಕ್ಷಣ ಮತ್ತು ಕೌಶಲ ಎರಡೂ ಜೊತೆಯಲ್ಲಿರಬೇಕೆಂದು ಹೇಳಿದ ಗಾಂಧೀಜಿಯವರನ್ನು ನಾವು ಮರೆತ ಕಾರಣಕ್ಕಾಗಿ ಇಂದು ನಿರುದ್ಯೋಗ ಮತ್ತು ನಮ್ಮ ಶಿಕ್ಷಣಕ್ಷೇತ್ರದಲ್ಲಿ ಅಸಹಜತೆ – ಇವು ಕಾಣಬರುತ್ತಿದೆ.

ಮಹಾತ್ಮ ಗಾಂಧೀಜಿ ಅವರ ಆರ್ಥಿಕನೀತಿ ನಗರಾಧಾರಿತವಾಗಿರದೆ, ವಿಕೇಂದ್ರೀಕರಣಗೊಂಡು ಗ್ರಾಮೀಣ ಆರ್ಥಿಕತೆಯನ್ನು ಪ್ರೋತ್ಸಾಹಿಸುವಂತಿತ್ತು. ಪಾಶ್ಚಾತ್ಯರ ಆರ್ಥಿಕ ನೀತಿಯ ಅಂಧಾನುಕರಣೆಯಿಂದ ಭಾರತದ ಕೃಷಿ ಮತ್ತು ಸಣ್ಣ ಉದ್ಯಮಗಳು ಇಂದು ಸಂಪೂರ್ಣವಾಗಿ ನೆಲಕಚ್ಚಿದೆ. ಅದಕ್ಕೆ ಜಾಗತೀಕರಣದ ಸಂದರ್ಭದಲ್ಲಿ ದೇಶ ಅನುಸರಿಸಿದ ನೀತಿ ಕೂಡ ಕಾರಣವಾಗಿದೆ.

ಎರಡನೆಯದಾಗಿ ಮಹಾತ್ಮ ಗಾಂಧೀಜಿ ಅವರು ಬಡವರು ಬಳಸುವ ಅತ್ಯಂತ ಆವಶ್ಯಕ ವಸ್ತುವಾಗಿದ್ದ ಉಪ್ಪಿನ ಸತ್ಯಾಗ್ರಹಕ್ಕೆ ಪ್ರಾಮುಖ್ಯವನ್ನು ನೀಡಿದರು. ಉಪ್ಪಿಗೆ ತೆರಿಗೆ ಹಾಕಿದ ಬ್ರಿಟಿಷರ ವಿರುದ್ಧ ಅವರು ಹೋರಾಡಿದರು. ಬಡವರಿಗೆ ಹೆಚ್ಚು ತೆರಿಗೆ ವಿಧಿಸದೆ ಶ್ರೀಮಂತರಿಗೆ ಹೆಚ್ಚು ತೆರಿಗೆಯನ್ನು ಹಾಕುವ ವ್ಯವಸ್ಥೆ ಇರಬೇಕೆಂಬುದು ಅವರ ಉದ್ದೇಶವಾಗಿತ್ತು. ಇಂದು ಬಡವರು ಹೆಚ್ಚು ತೆರಿಗೆಯನ್ನು ಕೊಡುತ್ತಿದ್ದಾರೆ. ಕಾರ್ಪೊರೇಟ್ ಕಂಪನಿಗಳ ತೆರಿಗೆಯನ್ನು ಕಡಮೆ ಮಾಡುವುದಕ್ಕೆ ಅಥವಾ ಅದನ್ನು ರದ್ದುಮಾಡುವುದಕ್ಕೆ ಎಲ್ಲ ಸರ್ಕಾರಗಳೂ ಉತ್ಸುಕವಾಗಿರುತ್ತವೆ. ದೇಶದ ಸಣ್ಣ ಮತ್ತು ಮಧ್ಯಮ ಕೈಗಾರಿಕಾವಲಯಗಳು ಕರೋನ ಸಂದರ್ಭದಲ್ಲಿ ನೆಲಕಚ್ಚಿದ್ದವು. ಜಿಎಸ್‌ಟಿಯ ಕಾರಣದಿಂದ ಯಾವುದೇ ಉದ್ಯಮ ಲಾಭದಾಯಕವಾಗಿ ನಡೆಯುತ್ತಿಲ್ಲ. ಹಿಂದೆ ಸಣ್ಣ ಮತ್ತು ಅತಿ ಸಣ್ಣ ಉದ್ಯಮಗಳು ಸ್ಥಳೀಯರಿಗೆ ಉದ್ಯೋಗವನ್ನು ಒದಗಿಸುತ್ತಿದ್ದುದರಿಂದ ಅವುಗಳಿಗೆ ಸಬ್ಸಿಡಿ ಕೊಡುವ ವ್ಯವಸ್ಥೆಯಿತ್ತು.

▸▸ 3ನೇ ಪುಟಕ್ಕೆ...

**ಪತ್ರಿಕೆಯ ಬಳಗ**

ಸಹಾಯಕ ಸಂಪಾದಕರು
**ಅಂಬಿಕಾ ಎಂ. ಹುಲಿನಾಯ್ಕರ್**

ಸಂಯೋಜಕ ಸಂಪಾದಕರು
**ಎಂ.ಎಸ್.ಪಾಟೀಲ್**

ಸಲಹಾ ಸಂಪಾದಕರು
**ಎನ್.ಭಾರತಿ**

ಸಂಪಾದಕ ಮಂಡಲಿ
**ಡಾ. ಭವಾನಿ ಸ್ಟಾಲಿನ್**
**ಡಾ. ಮನೋನ್ಮಣಿ ಎಂ.ಎಚ್**
**ಡಾ. ಲಾವಣ್ಯ ರಮಣ**

ಸಹಾಯಕ ಸಂಪಾದಕರು:
**ಎನ್. ಆನಂದ**

ಪುಟ ವಿನ್ಯಾಸ:
**ಸುಮಾ ಸಾಗರ್**

### ತುಮಕೂರಿನಲ್ಲಿ ಮೊಟ್ಟಮೊದಲ ಬಾರಿಗೆ ಉತ್ತರವಲಯ ಕ್ರೀಡಾಕೂಟ

# ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಗೆ ಬಹುಮಾನಗಳ ಸುರಿಮಳೆ

'ಫಿಟ್ ಇಂಡಿಯಾ ಪರಿಕಲ್ಪನೆ: ಗುರಿ ಸಾಧನೆಗೆ ಕ್ರೀಡೆಗಳು ಪ್ರಯೋಜನಕಾರಿ' ಎಂದು ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ವೈದ್ಯಕೀಯ ನಿರ್ದೇಶಕ ಡಾ. ರಮಣ್ ಹುಲಿನಾಯ್ಕರ್ ಪ್ರತಿಪಾದಿಸಿದರು. ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಇದೇ ಮೊಟ್ಟಮೊದಲ ಬಾರಿಗೆ ತುಮಕೂರಿನ ಶ್ರೀದೇವಿ ವೈದ್ಯಕೀಯ ಕಾಲೇಜಿನ ಮೈದಾನದಲ್ಲಿ ಜರುಗಿದ ಉತ್ತರವಲಯ ಅಂತರ ಕಾಲೇಜು ಥ್ರೋಬಾಲ್ ಮತ್ತು ಟೆನಿಕಾಟ್ ಪಂದ್ಯಾವಳಿ ಉದ್ಘಾಟನಾ ಸಮಾರಂಭದಲ್ಲಿ ಅವರು ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. 'ಕ್ರೀಡೆಯಿಂದ ದೈಹಿಕ ಚಟುವಟಿಕೆಗಳು ಹೆಚ್ಚಾಗಿ, ನರನಾಡಿಗಳು ಸಡಿಲಗೊಂಡು ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ಶಾಲಾ-ಕಾಲೇಜು ವಿದ್ಯಾರ್ಥಿಗಳು ಪಠ್ಯದ ಕಡೆ ಕೊಡುವಷ್ಟೆ ಗಮನವನ್ನು ಕ್ರೀಡೆಗೂ ಕೊಡಬೇಕು' ಎಂದು ಶ್ರೀಯುತರು ಹೇಳಿದ್ದಾರೆ. 'ಮಹಿಳಾ ಥ್ರೋಬಾಲ್ ಹಾಗೂ ಟೆನಿಕಾಟ್ ಪಂದ್ಯಾವಳಿಯಲ್ಲಿ ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ತಂಡವೇ ಹೆಚ್ಚು ಬಹುಮಾನ ಪಡೆದಿದೆ ಮತ್ತು ಕಾಲೇಜು ವಿದ್ಯಾರ್ಥಿಗಳು ಪಠ್ಯದಲ್ಲಿ ಮಾಡಿದ ಸಾಧನೆಯಂತೆ ಕ್ರೀಡೆಯಲ್ಲಿಯೂ ಕೀರ್ತಿಯನ್ನು ತಂದಿದ್ದಾರೆ' ಎಂದು ಅವರು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಎರಡು ಪಂದ್ಯಗಳಿಂದ ಈ ಕಾಲೇಜು ಒಟ್ಟು ಏಳು ಬಹುಮಾನಗಳನ್ನು ಬಾಚಿಕೊಂಡಿರುವುದು ಅಭಿಮಾನದ ಸಂಗತಿಯಾಗಿದೆ.

ಮಹಿಳಾ ಥ್ರೋಬಾಲ್ ಪಂದ್ಯದಲ್ಲಿ ಪ್ರಥಮ ಮತ್ತು ದ್ವಿತೀಯ ಬಹುಮಾನವನ್ನು ಶ್ರೀದೇವಿ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಅಂಡ್ ರಿಸರ್ಚ್ ಹಾಸ್ಪಿಟಲ್ ತಂಡ ಹಾಗೂ ಎರಡನೆಯ ಬಹುಮಾನವನ್ನು ಶ್ರೀದೇವಿ ಫಿಜಿಯೋಥೆರಪಿ




ಕಾಲೇಜು ತಂಡ ತಮ್ಮ ಮುಡಿಗೇರಿಸಿಕೊಂಡಿವೆ.

ಪುರುಷರ ಥ್ರೋಬಾಲ್ ಸ್ಪರ್ಧೆಯಲ್ಲಿಯೂ ಶ್ರೀದೇವಿ ಫಿಜಿಯೋಥೆರಪಿ ಕಾಲೇಜು ತಂಡ ಮೂರನೆಯ ಬಹುಮಾನವನ್ನು ಹಾಗೂ ಶ್ರೀದೇವಿ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಅಂಡ್ ರಿಸರ್ಚ್ ಹಾಸ್ಪಿಟಲ್ ತಂಡ ನಾಲ್ಕನೆಯ ಬಹುಮಾನವನ್ನು, ಮಹಿಳಾ ಟೆನಿಕಾಟ್ ಪಂದ್ಯಾವಳಿಯಲ್ಲಿ ಒಂದು, ಮೂರು ಮತ್ತು ನಾಲ್ಕನೆಯ ಬಹುಮಾನಗಳನ್ನು ಬಾಚಿಕೊಂಡಿವೆ.

ಶ್ರೀದೇವಿ ಮೆಡಿಕಲ್ ಕಾಲೇಜಿನ ಕ್ರೀಡಾಸಮಿತಿಯ ಕಾರ್ಯದರ್ಶಿ ಹಾಗೂ ಪಂದ್ಯಾವಳಿಯ ಮುಖ್ಯ ಸಮನ್ವಯಕಾರ ಡಾ. ಎಸ್. ಮಧುಸೂದನ್ ಪಂದ್ಯಾವಳಿಯ ಬಗ್ಗೆ ವಿವರಣೆ ನೀಡಿ, ಇವುಗಳಲ್ಲಿ ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದ ಬಂದಿದ್ದ ಮೂವತ್ತಾರು ತಂಡಗಳ ಸುಮಾರು ಐದು ನೂರು ಕ್ರೀಡಾಪಟುಗಳು ಪಾಲ್ಗೊಂಡಿದ್ದರು ಎಂದು ಹೇಳಿದರು.

ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯ ಪ್ರತಿ ವರ್ಷ ಒಂದೊಂದು ಕಾಲೇಜಿನಲ್ಲಿ ಕ್ರೀಡಾ ಚಟುವಟಿಕೆ ಹಮ್ಮಿಕೊಂಡು ಬರುತ್ತಿದೆ. ಅದರಂತೆ ಶ್ರೀದೇವಿ ಕಾಲೇಜಿನ ಮನವಿಯ ಮೇರೆಗೆ 2024-25ನೆಯ ವರ್ಷದ ಅಂತರ ಕಾಲೇಜು ಥ್ರೋಬಾಲ್ ಮತ್ತು ಟೆನಿಕಾಟ್ ಪಂದ್ಯಾವಳಿಗಳನ್ನು ತುಮಕೂರಿನಲ್ಲಿ ಮೊಟ್ಟಮೊದಲ ಬಾರಿಗೆ ಆಯೋಜಿಸಲು ಅವಕಾಶ ಮಾಡಿಕೊಟ್ಟಿತ್ತು. ನಿರೀಕ್ಷೆಯಂತೆ ಮೂರು ಕ್ರೀಡಾ ಚಟುವಟಿಕೆಗಳಲ್ಲೂ ಶ್ರೀದೇವಿ ಕಾಲೇಜು ಒಟ್ಟು ಏಳು ಬಹುಮಾನಗಳನ್ನು ಬಾಚಿಕೊಂಡು ಕಾಲೇಜಿನ ಕೀರ್ತಿ, ಗೌರವಗಳನ್ನು ಹೆಚ್ಚಿಸಿದೆ. ಮಹಿಳಾ ಥ್ರೋಬಾಲ್ ಪಂದ್ಯಾವಳಿಯಲ್ಲಿ ಎರಡು, ಪುರುಷರ ಥ್ರೋಬಾಲ್ ಪಂದ್ಯದಲ್ಲಿ ಎರಡು ಹಾಗೂ ಮಹಿಳಾ ಟೆನಿಕಾಟ್ ಸ್ಪರ್ಧೆಯಲ್ಲಿ ಮೂರು ಬಹುಮಾನಗಳನ್ನು ಮುಡಿಗೇರಿಸಿಕೊಂಡಿದೆ.

"ಇಲ್ಲಿ ಕ್ರಮವಾಗಿ ಒಂದು ಮತ್ತು ಎರಡನೇ ಬಹುಮಾನಗಳನ್ನು ಗಳಿಸಿದ ತಂಡಗಳು ಇದೇ ವರ್ಷ ನವೆಂಬರ್ ತಿಂಗಳಲ್ಲಿ ನಡೆಯಲಿರುವ ಶಿವಮೊಗ್ಗದಲ್ಲಿ ಅಂತರವಲಯ ಕ್ರೀಡಾಪಂದ್ಯಾವಳಿಗಳಲ್ಲಿ ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಬೇಕಾಗಿದೆ. ಶಿವಮೊಗ್ಗದಲ್ಲಿ ಗೆಲ್ಲುವ ತಂಡವನ್ನು ವಿಶ್ವವಿದ್ಯಾನಿಲಯದ ಮಟ್ಟಕ್ಕೆ ಆಯ್ಕೆ ಮಾಡಲಾಗುತ್ತದೆ. ಆದುದರಿಂದ ಮುಂಬರುವ ಎರಡು ಮಹತ್ವದ ಕ್ರೀಡಾ ಘಟನಾವಳಿಗಳನ್ನು ಗಮನದಲ್ಲಿಟ್ಟುಕೊಂಡು ಕಾಲೇಜಿನ ವಿದ್ಯಾರ್ಥಿಗಳನ್ನು ವಿಶ್ವವಿದ್ಯಾಲಯದ ಮಟ್ಟದ ಕ್ರೀಡಾಸ್ಪರ್ಧೆಗೆ ಆಯ್ಕೆಮಾಡುವುದು ನಮ್ಮ ಗುರಿಯಾಗಿದೆ. ಇದಕ್ಕೆ ಕಾಲೇಜು ಆಡಳಿತ ಮಂಡಳಿ ಅಗತ್ಯ ಸಹಕಾರ, ಪ್ರೋತ್ಸಾಹಗಳನ್ನು ನೀಡುತ್ತಿದೆ ಮತ್ತು ವಿದ್ಯಾರ್ಥಿಗಳಿಂದಲೂ ಸಕಾರಾತ್ಮಕ ಸ್ಪಂದನೆ ದೊರಕುತ್ತಿದೆ" ಎಂದು ಡಾ. ಮಧುಸೂದನ್ ಅವರು ನುಡಿದರು.

ಸೆಪ್ಟೆಂಬರ್ 30ರಂದು ನಡೆದ ಕ್ರೀಡಾ ಪಂದ್ಯಾವಳಿಯನ್ನು ಶ್ರೀದೇವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ. ಎಂ.ಆರ್. ಹುಲಿನಾಯ್ಕರ್ ಅವರು ಉದ್ಘಾಟಿಸಿದರು. ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ಎಂ.ಎಲ್. ಹರೇಂದ್ರ ಕುಮಾರ್ ಅವರು ಈ ಸಂದರ್ಭದಲ್ಲಿ ಮಾತನಾಡಿ "ವಿದ್ಯಾರ್ಥಿಗಳ ಕ್ರೀಡಾ ಚಟುವಟಿಕೆಗಳಿಗಾಗಿ ಪ್ರತ್ಯೇಕ ಒಳಾಂಗಣ ಮತ್ತು ಹೊರಾಂಗಣ ಕ್ರೀಡಾಸಮುಚ್ಚಯಗಳನ್ನು ನಿರ್ಮಿಸಲಾಗಿದೆ. ಇಲ್ಲಿನ ಉತ್ತಮ ಸೌಲಭ್ಯಗಳನ್ನು ಆಧರಿಸಿ ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯ ಇದೇ ಮೊದಲ ಬಾರಿಗೆ ಪಂದ್ಯಾವಳಿಗೆ ಅವಕಾಶ ನೀಡಿದ್ದುದು ಕಾಲೇಜಿನಲ್ಲಿ ಸಮಗ್ರ ಕ್ರೀಡಾಬೆಳವಣಿಗೆಗೆ ಸಹಕಾರಿಯಾಗಿದೆ" ಎಂದು ತಮ್ಮ ಅನಿಸಿಕೆಯನ್ನು ಹಂಚಿಕೊಂಡರು.

■ ವರದಿ: ಎನ್. ಆನಂದ

▶▶ 2ನೇ ಪುಟದಿಂದ

ಇಂದು ಇಂತಹ ಉದ್ಯಮಗಳಿಗೆ ಪ್ರೋತ್ಸಾಹವಿಲ್ಲ. ಜಾಗತೀಕರಣದಿಂದಾಗಿ ಭಾರತದ ಮಾರುಕಟ್ಟೆಗೆ ವಿದೇಶಿ ವಸ್ತುಗಳು ಲಗ್ಗೆಯಿಟ್ಟಿವೆ. ಮಕ್ಕಳ ಆಟದ ಸಾಮಾನುಗಳು ಸಹ ವಿದೇಶದಿಂದ ಬರುವಂತಾಗಿದೆ.

ಆರ್ಥಿಕಕ್ಷೇತ್ರ ಮಾನವಸಂಪನ್ಮೂಲದ ಮೇಲೆ ಹೆಚ್ಚು ಅವಲಂಬಿತವಾಗಿರಬೇಕು ಮತ್ತು ಯಂತ್ರಗಳ ಬಳಕೆಯನ್ನು ಸಾಧ್ಯವಾದಷ್ಟು ಕಡಮೆಮಾಡಬೇಕು ಎನ್ನುವುದು ಅವರ ಚಿಂತನೆಯಾಗಿತ್ತು. ಜನಬಾಹುಳ್ಯವಿರುವ ಭಾರತದಲ್ಲಿ ಜನರಿಗೆ ಉದ್ಯೋಗ ಕೊಡುವುದು ಸರ್ಕಾರದ ಜವಾಬ್ದಾರಿಯಾಗಿರುತ್ತದೆ. ಇಂದು ಉದ್ಯಮಕ್ಷೇತ್ರಕ್ಕೆ ಮಾನವಸಂಪನ್ಮೂಲ ಅಗತ್ಯವಿಲ್ಲವೆನ್ನುವ ಸ್ಥಿತಿಗೆ ಭಾರತ ಬಂದು ತಲುಪಿದೆ. 140 ಕೋಟಿ ಜನಸಂಖ್ಯೆಯುಳ್ಳ ಭಾರತಕ್ಕೆ ಸ್ವತಂತ್ರ ಆರ್ಥಿಕ ನೀತಿ ಇರಬೇಕು. ವಿದೇಶದ ಕಂಪನಿಗಳಿಗೆ ಅನುಕೂಲ ಮಾಡಿಕೊಡುವ ಆರ್ಥಿಕ ನೀತಿಯನ್ನು ನಾವು ಅನುಸರಿಸುತ್ತಿದ್ದೇವೆ. ಏಳು ದಶಕಗಳಲ್ಲಿ ನಮ್ಮ ಆಡಳಿತಗಾರರು ಈ ದೇಶವನ್ನು ಯಾವ ಸ್ಥಿತಿಗೆ ತಂದು ನಿಲ್ಲಿಸಿದ್ದಾರೆ ಎನ್ನುವುದನ್ನು ಗಮನಿಸಿದರೆ, ಭಾರತದ ಭವಿಷ್ಯವನ್ನು ಕುರಿತು ಆತಂಕವಾಗುತ್ತದೆ.

ಮೂರನೆಯದಾಗಿ ಗಾಂಧೀಜಿ ಅವರು ಸಾರ್ವಜನಿಕ ಕ್ಷೇತ್ರದಲ್ಲಿರುವವರನ್ನು 'ಧರ್ಮದರ್ಶಿ'ಗಳೆಂದು ಕರೆದಿದ್ದರು. ಸಾರ್ವಜನಿಕರ ಹಣವನ್ನು ಪ್ರಾಮಾಣಿವಾಗಿ ಜನತೆಯ ಅಭಿವೃದ್ಧಿಗೆ ಬಳಸಬೇಕು ಎನ್ನುವುದು ಅವರ ಆಶಯವಾಗಿತ್ತು. ನಮ್ಮನ್ನಾಳುವ ನಾಯಕರು ಸರಳ ಜೀವನವನ್ನು ನಡೆಸಬೇಕೆಂದು ಗಾಂಧೀಜಿ ಒತ್ತಿಹೇಳುತ್ತಿದ್ದರು. ಅವರ ಆಶಯದಂತೆ ಲಾಲ್ ಬಹದ್ದೂರ್ ಶಾಸ್ತ್ರಿ, ಕಾಮರಾಜ್, ಗುಲ್ಜಾರಿ ಲಾಲ್ ನಂದ ಮೊದಲಾದವರು ಆಡಂಬರರಹಿತ, ಭ್ರಷ್ಟಾಚಾರಕ್ಕೆ ಆಸ್ಪದಕೊಡದ ಸರಳ ಜೀವನ ನಡೆಸಿದರು. ಕರ್ನಾಟಕದಲ್ಲಿ ಗಾಂಧೀಜಿಯವರ ಆಶಯದಂತೆ ಬದುಕಿದ್ದ ಎಸ್ ನಿಜಲಿಂಗಪ್ಪ, ಕಡಿದಾಳ್ ಮಂಜಪ್ಪ, ಎಚ್.ಎಸ್. ರುದ್ರಪ್ಪ, ಹೆಚ್.ಜಿ. ಗೋವಿಂದಗೌಡ ಮೊದಲಾದವರನ್ನು ನೆನೆಯಬಹುದು.

ಇಂದು ಆಡಳಿತದಲ್ಲಿರುವ ನಾಯಕರು ಹಿಂದಿನ ರಾಜ ರಾಜಮಹಾರಾಜರನ್ನು ಮೀರಿಸುವಂತಹ ವೈಭವೋಪೇತ ಜೀವನವನ್ನು ನಡೆಸುತ್ತಿದ್ದಾರೆ. ಪ್ರಧಾನಮಂತ್ರಿ, ಮುಖ್ಯಮಂತ್ರಿ, ಸಚಿವರು, ರಾಜ್ಯಪಾಲರು ಮೊದಲಾದವರು ಸರಳ ಜೀವನವನ್ನು ನಡೆಸುತ್ತಾ ಇದ್ದಿದ್ದರೆ ಅದು ಆಡಳಿತವರ್ಗದ ಮೇಲೆ ಪ್ರಭಾವ ಬೀರುತ್ತಿತ್ತು. ಇಂದು ಸಾರ್ವಜನಿಕರ ಹಣದಲ್ಲಿ ದುಂದುವೆಚ್ಚ ಮಾಡುವ ಗುಂಪಿಗೆ ಜನಪ್ರತಿನಿಧಿಗಳ ಜೊತೆಗೆ ಆಡಳಿತವರ್ಗವೂ ಸೇರಿಕೊಂಡಿದೆ.

ನಾಲ್ಕನೆಯದಾಗಿ ಗಾಂಧೀಜಿಯವರು ಹಿಂದೂ-ಮುಸ್ಲಿಮರ ನಡುವೆ ಸಂಘರ್ಷಕ್ಕೆ ಅವಕಾಶ ಕೊಡದಂತಹ ಸಾಮರಸ್ಯದ ವಾತಾವರಣವನ್ನು ಬಯಸಿದ್ದರು. 1947 ಆಗಸ್ಟ್ 15ರಂದು ನಮಗೆ ಸ್ವಾತಂತ್ರ್ಯ ದೊರೆತು ಅಂದಿನ ಮಧ್ಯರಾತ್ರಿಯಲ್ಲಿ ಕೆಂಪು ಕೋಟೆಯ ಮೇಲೆ ತ್ರಿವರ್ಣ ಧ್ವಜ ಹಾರಿಸಿದ ಸಮಾರಂಭದಲ್ಲಿ ಮಹಾತ್ಮ ಗಾಂಧೀಜಿಯವರು ಭಾಗವಹಿಸದೆ ಕೋಮುಗಲಭೆಯಿಂದ ಹೊತ್ತಿ ಉರಿಯುತ್ತಿದ್ದ ಬಂಗಾಳ ಮತ್ತು ಬಿಹಾರಗಳಲ್ಲಿ ಪ್ರವಾಸ ಮಾಡುತ್ತಾ ನೊಂದವರಿಗೆ ಸಾಂತ್ವನ ಹೇಳುತ್ತಾ ಜನರ ಮನವೊಲಿಸಲು ಉಪವಾಸ ಮಾಡುತ್ತಿದ್ದರು. ಅವರು ಭಾರತ ಮತ್ತು ಪಾಕಿಸ್ತಾನದ ರಚನೆಗೆ ಒಪ್ಪದೆ, ಬ್ರಿಟಿಷರ ಈ ತಂತ್ರವನ್ನು ವಿರೋಧಿಸಿಕೊಂಡು ಬಂದಿದ್ದರು. 1945ರ ಅನಂತರ ದೇಶಕ್ಕೆ ಸ್ವಾತಂತ್ರ್ಯ ಬರುವುದು ಖಚಿತವಾದ ಮೇಲೆ ಆಗಿನ ಕಾಂಗ್ರೆಸ್ ನಾಯಕರು ಗಾಂಧೀಜಿ ಅವರನ್ನು ಬಿಟ್ಟು ಅಧಿಕಾರ ಗಿಟ್ಟಿಸಿಕೊಳ್ಳಲು ಮುಂದಾದರು. ದೇಶದಲ್ಲಿ ಎರಡೂ ಸಮುದಾಯದವರ ನಡುವೆ ದ್ವೇಷವು ತಾರಕಕ್ಕೇರುತ್ತಿತ್ತು. ಅಂತಿಮವಾಗಿ 1948ರ ಜನವರಿ 30ರಂದು ಗಾಂಧೀಜಿಯವರನ್ನು ಈ ಕೋಮುದ್ವೇಷ ಬಲಿತೆಗೆದುಕೊಂಡಿತು.

## ಗಾಂಧಿಮಾರ್ಗದ ಅನುಸರಣೆಯ ಅಗತ್ಯ

ಗಾಂಧೀಜಿ ಹೇಳಿದ್ದ ಹಿಂದೂ ಮುಸ್ಲಿಂ ಸಾಮರಸ್ಯ ಇಂದು ಕನಸಿನ ಮಾತಾಗಿದೆ ಮತ್ತು ಬೆಸೆಯಲಾಗದಷ್ಟು ಹಾಳಾಗಿಹೋಗಿದೆ. ದೇಶಕ್ಕೆ ಏನಾದರೂ ಆಗಲಿ ತಮ್ಮ ಪಕ್ಷ ಅಧಿಕಾರಕ್ಕೆ ಬರಬೇಕು ಎಂಬ ಏಕೈಕ ದೃಷ್ಟಿಯಿಂದ ರಾಜಕೀಯ ನಾಯಕರು ವ್ಯವಹರಿಸುತ್ತಿದ್ದಾರೆ. ಗಾಂಧೀಜಿ ಹೇಳಿದ ಸಹಮತ ಮತ್ತು ಸಹಬಾಳ್ವೆಗಳು ರಾಜಕೀಯ ಕ್ಷೇತ್ರಕ್ಕೆ ಇಂದು ಅಪರಿಚಿತ ಶಬ್ದಗಳಾಗಿವೆ. ವೈಯಕ್ತಿಕ ಪ್ರತಿಷ್ಠೆ ಮತ್ತು ತತ್ಕಾಲದ ಲಾಭದ ಮೇಲೆ ಎಲ್ಲರೂ ತಮ್ಮ ಗಮನವನ್ನು ಕೇಂದ್ರೀಕರಿಸುತ್ತಿದ್ದಾರೆ. ಇವರ ಕಾರ್ಯಗಳಿಗೆ ದೇಶದ ಮಾಧ್ಯಮಗಳು ತುಪ್ಪ ಸುರಿಯುತ್ತಿವೆ. ಪಕ್ಷಗಳ ನಡುವಿನ ಹೋರಾಟ ಮತ್ತು ಸಂಘರ್ಷ ಎಲ್ಲೆಡೆ ಹಿಂಸೆಯ ರೂಪವನ್ನು ಪಡೆದಿವೆ.

ದೇಶದ ಬೆಳವಣಿಗೆಗೆ ಅಲ್ಲಿನ ಸಮಾಜದಲ್ಲಿ ಸಾಮರಸ್ಯವಿರುವುದು ಅತ್ಯಗತ್ಯ. ಹಿಂದೆ ಭಾರತ ಬ್ರಿಟಿಷರ ಕೈವಶವಾಗಲು ನಮ್ಮಲ್ಲಿದ್ದ ಆಂತರಿಕ ಸಂಘರ್ಷವೇ ಕಾರಣವೆಂಬುದನ್ನು ಇತಿಹಾಸ ಹೇಳುತ್ತದೆ. ಪಾಕಿಸ್ತಾನ, ಬಾಂಗ್ಲಾದೇಶ, ಆಫ್ಘಾನಿಸ್ತಾನ, ಶ್ರೀಲಂಕಾ, ಯುಕ್ರೇನ್, ಇಸ್ರೇಲ್ ಮೊದಲಾದ ದೇಶಗಳ ಇಂದಿನ ಸ್ಥಿತಿಯನ್ನು ನಮ್ಮ ರಾಜಕೀಯ ನಾಯಕರು ಒಮ್ಮೆ ವಿಶ್ಲೇಷಿಸಬೇಕು.

ದೇಶ ಅತ್ಯಂತ ವಿಷಮ ಪರಿಸ್ಥಿತಿಯಲ್ಲಿದ್ದಾಗ ಗಾಂಧೀಜಿ ನೆನಪಾಗುತ್ತಾರೆ. ಭಾರತೀಯರಲ್ಲಿ ಶುದ್ಧ ರಾಷ್ಟ್ರೀಯ ಭಾವನೆ ಬೆಳೆಸಿದವರಲ್ಲಿ ಅವರಿಗೆ ಮೊದಲ ಸ್ಥಾನವಿದೆ. ಅವರು ಯಾವುದೇ ದೇಶ ಹೆಮ್ಮೆಪಟ್ಟುಕೊಳ್ಳಬಹುದಾದ ನಾಯಕರಾಗಿದ್ದರು. ಇಂದಿಗೂ ಅವರ ಪ್ರಭಾವ ಭಾರತೀಯ ಸಮಾಜದ ಮೇಲಿದೆ. ಮುಂಬೈ ಕರ್ನಾಟಕದ ಪ್ರತಿ ಹಳ್ಳಿಯಲ್ಲಿಯೂ ಅವರನ್ನು ಗೌರವಿಸುವುದನ್ನು ನಾವು ನೋಡಬಹುದು. ಭಾರತ ಮತ್ತೆ ಗಾಂಧಿಯವರ ಚಿಂತನೆಯತ್ತ ಮುಖ ಮಾಡಬೇಕಾಗಿದೆ, ಅವರ ರಚನಾತ್ಮಕ ಕೆಲಸಗಳನ್ನು ಮುಂದುವರಿಸುವುದು ತಮ್ಮ ಕರ್ತವ್ಯವೆಂದು ನಮ್ಮ ನಾಯಕರು ತಿಳಿದುಕೊಳ್ಳಬೇಕು. ಗಾಂಧೀಜಿಯತ್ತ ಜನರ ಆಸಕ್ತಿಯನ್ನು ತಿರುಗಿಸಿದರೆ ಅವರಲ್ಲಿ ಆದರ್ಶ ಬಿತ್ತುವುದು ಕಷ್ಟದ ಕೆಲಸವಲ್ಲ. ಆದರೆ ಗಾಂಧೀಜಿ ಹೇಳಿದಂತೆ ಸಾರ್ವಜನಿಕಕ್ಷೇತ್ರದ ನಾಯಕರು ಪ್ರಾಮಾಣಿಕರಾಗಿರಬೇಕು. ಇಂದು ಇಡೀ ವಿಶ್ವವು ಮಹಾಯುದ್ಧದ ಭಯದಿಂದ ನಡುಗುತ್ತಿದೆ. ಹಸಿವು, ಅನಾರೋಗ್ಯ, ಶೋಷಣೆ ಎಲ್ಲ ದೇಶಗಳಲ್ಲೂ ಇರುವ ಸಮಾನ ವಿಷಯಗಳಾಗಿರುವ ಈ ಸಂದರ್ಭದಲ್ಲಿ ಮಹಾತ್ಮ ಗಾಂಧೀಜಿಯವರ ಚಿಂತನೆಗಳು ನಮಗೆ ದಾರಿದೀಪವಾಗಬಲ್ಲವು.

## ವಿದ್ವಾಂಸರ ಅಭಿಪ್ರಾಯ

ಬ್ರಿಟಿಷ್ ವಿದ್ವಾಂಸ, ಚಿಂತಕ ಗಿಲ್ಬರ್ಟ್ ಮರ್ರೆ ಹೇಳಿರುವ ಕೆಲವು ಮಾತುಗಳನ್ನು ಚಿಂತಿಸುತ್ತಾ ಗಾಂಧೀಜಿಯ ವ್ಯಕ್ತಿತ್ವವನ್ನು ಮತ್ತೊಮ್ಮೆ ಮೆಲುಕುಹಾಕೋಣ.

**"ಇಂದ್ರಿಯ ಸುಖಕ್ಕಾಗಿ ಯಾವ ಕಾಳಜಿಯನ್ನೂ ವಹಿಸದ, ಸಂಪತ್ತಿನ ಬಗೆಗೆ ಕಾಳಜಿಯಿಲ್ಲದ, ಹೊಗಳಿಕೆಗೆ ಮತ್ತು ಸ್ವಂತ ಸುಖ, ಪ್ರಚಾರಗಳಿಗೆ ಗಮನಕೊಡದ, ತಾನು ಸರಿ ಎಂದು ನಂಬಿಕೊಂಡಿದ್ದುದನ್ನು ಎಂತಹ ಪರಿಸ್ಥಿತಿಯಲ್ಲಿಯೂ ಅನುಷ್ಠಾನಮಾಡುವ ಈ ವ್ಯಕ್ತಿ ಸಾಮಾನ್ಯನಲ್ಲ. ನೀವು ಅವರ ಭೌತಿಕ ಶರೀರವನ್ನು ನಾಶಪಡಿಸಬಹುದು, ಅವರ ಆತ್ಮವನ್ನು ಖರೀದಿಸುವುದು ಯಾರಿಗೂ ಸಾಧ್ಯವಿಲ್ಲ.**

■ ನಿರೂಪಣೆ: ಶ್ರೀವತ್ಸ

# ಮಹಿಳೆಯರಲ್ಲಿ ಹಾರ್ಮೋನುಗಳ ಅಸಮತೋಲನದ ಸಮಸ್ಯೆಗಳು



■ ಡಾ.ರೇಖಾ ಗುರುಮೂರ್ತಿ
ಸ್ತ್ರೀರೋಗ ತಜ್ಞೆ
ಹಾಗೂ ಉಪ ಪ್ರಾಂಶುಪಾಲರು,
ನಿರ್ದೇಶಕರು,
ಸ್ನಾತಕೋತ್ತರ ಕೇಂದ್ರ




**ಒಂದು ವಿಚಾರ ಸಂಕಿರಣ**

ಚಯಾಪಚಯದ ವ್ಯವಸ್ಥೆಯಲ್ಲಿನ ಏರುಪೇರಿನಿಂದಾಗಿ ಹದಿಹರೆಯದ ಹೆಣ್ಣುಮಕ್ಕಳಲ್ಲಿ ಮತ್ತು ಮಧ್ಯವಯಸ್ಕ ಮಹಿಳೆಯರಲ್ಲಿ ಹಾರ್ಮೋನುಗಳ ಅಸಮತೋಲನವುಂಟಾಗಿ ಹಲವಾರು ಸಮಸ್ಯೆಗಳು ಕಾಣಿಸಿಕೊಳ್ಳಬಹುದು. ಇದಕ್ಕೆ ಪಾಲಿಸಿಸ್ಟಿಕ್ ಓವರಿ ಸಿಂಡ್ರೋಮ್ ಎನ್ನುತ್ತಾರೆ. ಇದನ್ನು ಪ್ರಾರಂಭಿಕ ಹಂತದಲ್ಲಿ ಗುರುತಿಸಿ ಸೂಕ್ತ ಚಿಕಿತ್ಸೆಯನ್ನು ಕೊಡಿಸದಿದ್ದರೆ, ಇದು ಅವರನ್ನು ಋತುಬಂಧದ ಸಮಯದವರೆಗೂ ಕಾಡಬಹುದು. ಇಂತಹ ಮಹಿಳೆಯರು ತಮ್ಮ ಋತುಚಕ್ರದಲ್ಲಿನ ಬದಲಾವಣೆ, ಬಂಜೆತನ ಮತ್ತು ಗರ್ಭಿಣಿಯರಾದ ಸಮಯದಲ್ಲಿ ಕಂಡುಬರುವ ಕೆಲವು ಸಮಸ್ಯೆಗಳ ಬಗೆಗೆ ಸಲಹೆಯನ್ನು ಪಡೆಯಲು ಸಾಮಾನ್ಯವಾಗಿ ಸ್ತ್ರೀರೋಗತಜ್ಞರ ಬಳಿಗೆ ಹೋಗುತ್ತಾರೆ. ಹೆಣ್ಣುಮಕ್ಕಳು ಸಾಮಾನ್ಯವಾಗಿ ಈ ಸಿಂಡ್ರೋಮಿನ ಪರಿಣಾಮಗಳಾದ ಮುಖದ ಮೇಲೆ ಕಾಣಿಸಿಕೊಳ್ಳುವ ಕೂದಲು, ಆಂಡ್ರೋಜಿನ್‌ನ ಆಧಿಕ್ಯದ ಕಾರಣದಿಂದ ಕತ್ತು ಕಪ್ಪಾಗುವುದು ಇಂತಹವುಗಳಿಗಾಗಿ ಪರಿಹಾರವನ್ನು ಕಂಡುಕೊಳ್ಳಲು ಚರ್ಮರೋಗತಜ್ಞರನ್ನು ಸಂಪರ್ಕಿಸುತ್ತಾರೆ.



ಇಂತಹ ಮಹಿಳೆಯರನ್ನು ಅಲ್ಟ್ರಾಸೌಂಡ್ ಸ್ಕ್ಯಾನ್‌ಗೆ ಒಳಪಡಿಸಿದಾಗ ಅಂಡಾಶಯದಲ್ಲಿರುವ ಅಂಡಾಣುವಿನ ಸುತ್ತ ಇರಬಹುದಾದ ದ್ರವಪೂರಿತ ಸಣ್ಣಚೀಲಗಳನ್ನು ಪತ್ತೆ ಹಚ್ಚಬಹುದು. ಈ ಚೀಲಗಳು ಪಾಲಿಸಿಸ್ಟಿಕ್ ಓವರಿ ಸಿಂಡ್ರೋಮ್‌ಗೆ ಕಾರಣವಾಗಿರುತ್ತವೆ. ಈ ಸಿಂಡ್ರೋಮಿನ ಇತರ ಲಕ್ಷಣಗಳೆಂದರೆ, ತೂಕದಲ್ಲಿ ಏರಿಕೆ, ಹೊಟ್ಟೆಯ ಸುತ್ತ ಬೊಜ್ಜು, ಮುಖದಲ್ಲಿ ಮೊಡವೆ, ಚರ್ಮದ ಮೇಲೆ ಸಣ್ಣಸಣ್ಣ ಗಂಟುಗಳು, ಕಂಕುಳು ಹಾಗೂ ಕತ್ತಿನ ಹಿಂಭಾಗದಲ್ಲಿ ಕಪ್ಪು ಮಚ್ಚೆಗಳು, ಪುರುಷರಲ್ಲಿ ಕಂಡುಬರುವಂತೆ ಇವರಲ್ಲೂ ತಲೆಯಲ್ಲಿ ಕೂದಲು ಸಂಪೂರ್ಣವಾಗಿ ಅಥವಾ ಭಾಗಶಃ ಉದುರಿ ಹೋಗುವುದು, ಇತ್ಯಾದಿ.

ಪಾಲಿಸಿಸ್ಟಿಕ್ ಓವರಿ ಸಿಂಡ್ರೋಮ್ ಬಹಳ ಕಾಲ ಕಾಡುವ ಒಂದು ಸ್ಥಿತಿ. ಇದನ್ನು ಔಷಧಿಗಳು, ಜೀವನಶೈಲಿಯಲ್ಲಿ ಸೂಕ್ತ ಬದಲಾವಣೆಗಳು ಮತ್ತು ಬಂಜೆತನ ನಿವಾರಣೆಯ ಚಿಕಿತ್ಸೆಗಳ ಮೂಲಕ ನಿವಾರಿಸಿಕೊಳ್ಳಬಹುದು.

ಪ್ರತಿವರ್ಷ ಸೆಪ್ಟೆಂಬರ್ ಮಾಸವನ್ನು 'ಪಾಲಿಸಿಸ್ಟಿಕ್ ಓವರಿ ಸಿಂಡ್ರೋಮ್ ಜಾಗೃತಿ ಮಾಸ'ವನ್ನಾಗಿ ಆಚರಿಸಲಾಗುತ್ತದೆ. ಇದರಂತೆ, ಈ ಸೆಪ್ಟೆಂಬರ್ 28ರಂದು ಶ್ರೀದೇವಿ ವೈದ್ಯಕೀಯ ಕಾಲೇಜಿನ ಸಭಾಂಗಣದಲ್ಲಿ ಪ್ರಸೂತಿ ಹಾಗೂ ಸ್ತ್ರೀರೋಗ ವಿಭಾಗ, ಚರ್ಮರೋಗ ವಿಭಾಗ ಮತ್ತು ಸಾಮಾನ್ಯ ಔಷಧಿಗಳ ವಿಭಾಗ ಇವುಗಳು ಸಂಯುಕ್ತವಾಗಿ ಒಂದು ವಿಚಾರಸಂಕಿರಣವನ್ನು ಏರ್ಪಡಿಸಿದ್ದವು. ಈ ಸಿಂಡ್ರೋಮಿನ ಬಗೆಗೆ ಜಾಗೃತಿಯನ್ನು ಮೂಡಿಸುವುದು, ಇತ್ತೀಚಿಗೆ ಚಿಕಿತ್ಸಾಕ್ರಮದಲ್ಲಿ ಆಗಿರುವ ಆವಿಷ್ಕಾರಗಳನ್ನು ಪ್ರಚುರಪಡಿಸುವುದು ಈ ಸಂಕಿರಣದ ಉದ್ದೇಶವಾಗಿತ್ತು.

ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್ ಅವರು ದೀಪವನ್ನು ಬೆಳಗುವ ಮೂಲಕ ಈ ಸಂಕಿರಣವನ್ನು ಉದ್ಘಾಟಿಸಿದರು. ಮೆಡಿಕಲ್ ನಿರ್ದೇಶಕರಾದ ಡಾ. ರಮಣ್ ಹುಲಿನಾಯ್ಕರ್, ಮಾನವಸಂಪನ್ಮೂಲ ನಿರ್ದೇಶಕರಾದ ಎಂ.ಎಸ್. ಪಾಟೀಲ್, ಪ್ರಾಂಶುಪಾಲರಾದ ಡಾ. ಎಂ.ಎಲ್. ಹರೇಂದ್ರಕುಮಾರ್, ಹಾಗೂ ಬಿ.ಜಿ.ಎಸ್. ಆಸ್ಪತ್ರೆಯಲ್ಲಿ ಅಂತಃಸ್ರಾವಶಾಸ್ತ್ರದಲ್ಲಿ (Endocrinology) ಸಲಹೆಗಾರರಾಗಿರುವ ಡಾ. ಶ್ರೀನಾಥ್ ಅಶ್ವತ್ಥಯ್ಯ, ಮಣಿಪಾಲ್ ಆಸ್ಪತ್ರೆಯಲ್ಲಿ ಮಧುಮೇಹ ಮತ್ತು ಅಂತಃಸ್ರಾವಶಾಸ್ತ್ರದಲ್ಲಿ ಮುಖ್ಯ ಸಲಹೆಗಾರರಾಗಿರುವ ಡಾ. ರಾಜೇಶ್ವರಿ ಜಾನಕಿರಾಮನ್, ಎಂ.ಎಸ್. ರಾಮಯ್ಯ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಚರ್ಮಶಾಸ್ತ್ರಜ್ಞದ ಸಹಾಯಕ ಪ್ರಾಧ್ಯಾಪಕರಾಗಿರುವ ಡಾ. ಪಿ.ಆರ್. ಚೇತನ ಅವರು ಈ ಸಂಕಿರಣದಲ್ಲಿ ಗೌರವಾನ್ವಿತ ಅತಿಥಿ ಉಪನ್ಯಾಸಕರುಗಳಾಗಿ ಸಕ್ರಿಯವಾಗಿ ಭಾಗವಹಿಸಿದ್ದರು. ಇವರಲ್ಲದೆ, ಉಪಪ್ರಾಂಶುಪಾಲೆ ಮತ್ತು ಸ್ನಾತಕೋತ್ತರ ವಿಭಾಗದ ನಿರ್ದೇಶಕರಾಗಿರುವ ಡಾ. ರೇಖಾ ಗುರುಮೂರ್ತಿ, ಪ್ರಾಧ್ಯಾಪಕ ಮತ್ತು ಸಾಮಾನ್ಯ ಔಷಧಿ ವಿಭಾಗದ ಮುಖ್ಯಸ್ಥರಾಗಿರುವ ಡಾ. ಕೆ.ಎಲ್. ವಿರೂಪಾಕ್ಷ, ಪ್ರಾಧ್ಯಾಪಕಿ ಮತ್ತು ಚರ್ಮರೋಗ ವಿಭಾಗದ ಮುಖ್ಯಸ್ಥೆಯಾಗಿರುವ ಡಾ. ಎಸ್. ವತ್ಸಲಾ, ಚರ್ಮರೋಗ ವಿಭಾಗದಲ್ಲಿ ಪ್ರಾಧ್ಯಾಪಕರಾಗಿರುವ ಡಾ. ವೈ.ಬಿ. ಸೋಮಶೇಖರ್ ಅವರು ಸಹ ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಈ ಸಂಕಿರಣವನ್ನು ಆಯೋಜಿಸಿರುವುದರಲ್ಲಿ ವಿವಿಧ ವಿಭಾಗಗಳವರೂ ಸಕ್ರಿಯವಾಗಿ ಭಾಗವಹಿಸಿರುವುದಕ್ಕಾಗಿ ಡಾ. ಹುಲಿನಾಯ್ಕರ್ ಅವರು ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು. ಮಹಿಳೆಯರ ಈ ಸಮಸ್ಯೆಯನ್ನು ಪರಿಹರಿಸುವಲ್ಲಿ ಹಿಂದಿನ ವ್ಯವಸ್ಥೆಗಿಂತ ಹೊಸದಾಗಿ ಬಂದಿರುವ ವ್ಯವಸ್ಥೆಯು ಚಿಕಿತ್ಸೆಯ ಪ್ರಕ್ರಿಯೆಯನ್ನು ಬಹಳಷ್ಟು ಸರಳಗೊಳಿಸಿದೆ ಎಂದು ಅವರು ಹೇಳಿದರು. ಈ ಸಂಕಿರಣವು ವೈದ್ಯರ ಜ್ಞಾನದ ಪರಿಧಿಯನ್ನು ವಿಸ್ತರಿಸುತ್ತದೆ ಎಂದವರು ನುಡಿದರು.

ಕಾರ್ಯಕ್ರಮದ ಪ್ರಾರಂಭದಲ್ಲಿ, ಸ್ತ್ರೀರೋಗ ಹಾಗೂ ಪ್ರಸೂತಿಕಾ ವಿಭಾಗದ ಪ್ರಾಧ್ಯಾಪಕ ಡಾ. ಜೀವನ್ ರೆಡ್ಡಿಯವರು ಪಾಲಿಸಿಸ್ಟಿಕ್ ಓವರಿ ಸಿಂಡ್ರೋಮ್‌ನ ಸಂಕ್ಷಿಪ್ತ ಪರಿಚಯವನ್ನು ಕೊಟ್ಟರು. ಈ ಸಮಸ್ಯೆಯನ್ನು ಕುರಿತ ಮಾಹಿತಿ, ಸಮಾಜದಲ್ಲಿ ಈ ಸಮಸ್ಯೆಯಿಂದ ಆಗುತ್ತಿರುವ ತೊಂದರೆಗಳು, ಇದರ ತೀವ್ರತೆಯ ನಿವಾರಣೆಗಾಗಿ ಮಹಿಳೆಯರು ತಮ್ಮ ಜೀವನಶೈಲಿಯನ್ನು ಬದಲಾಯಿಸಿಕೊಳ್ಳಬೇಕಾದ ಅಗತ್ಯ ಮೊದಲಾದವುಗಳನ್ನು ಅವರು ತಮ್ಮ ಭಾಷಣದಲ್ಲಿ ಒತ್ತಿ ಹೇಳಿ ಕಾರ್ಯಕ್ರಮದ ಮುಂದಿನ ಹಾದಿಯನ್ನು ಸುಗಮಗೊಳಿಸಿಕೊಟ್ಟರು.

ತದನಂತರ, ಮಣಿಪಾಲ್ ಆಸ್ಪತ್ರೆಯಲ್ಲಿ ಮಧುಮೇಹ ಮತ್ತು ಅಂತಃಸ್ರಾವಶಾಸ್ತ್ರದ ಮುಖ್ಯ ಸಲಹೆಗಾರರಾಗಿರುವ ಡಾ. ರಾಜೇಶ್ವರಿ ಜಾನಕಿರಾಮನ್ ಅವರು ಪಾಲಿಸಿಸ್ಟಿಕ್ ಓವರಿ ಸಿಂಡ್ರೋಮ್‌ನ ಚಿಕಿತ್ಸೆಯಲ್ಲಿ ಆಗಿರುವ ಇತ್ತೀಚಿನ ಬೆಳವಣಿಗೆಯ ಬಗೆಗೆ ಮಾಹಿತಿಯನ್ನು ನೀಡಿದರು. ಅಪಾರವಾದ ಅನುಭವವನ್ನು ಹೊಂದಿರುವ ಡಾ. ರಾಜೇಶ್ವರಿ ಅವರು ರೋಗನಿದಾನವನ್ನು ಹಾಗೂ ಚಿಕಿತ್ಸೆಯನ್ನು ಮತ್ತು ರೋಗಿಗಳಿಗೆ ಅದರಿಂದ ದೊರೆಯುವ ಉಪಯೋಗಗಳನ್ನು ಕುರಿತು ಹಲವಾರು ಒಳನೋಟಗಳನ್ನು ನೀಡಿದರು.

ಎಂ.ಎಸ್. ರಾಮಯ್ಯ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಚರ್ಮಶಾಸ್ತ್ರದ ಸಹಾಯಕ ಪ್ರಾಧ್ಯಾಪಕರಾಗಿರುವ ಡಾ. ಪಿ.ಆರ್. ಚೇತನ ಅವರು ಈ ಸಿಂಡ್ರೋಮ್‌ನಿಂದ ಮಹಿಳೆಯರ ಚರ್ಮದ ಮೇಲೆ ಆಗುವ ಬದಲಾವಣೆಗಳು, ಹದಿಹರೆಯದ ಹುಡುಗಿಯರ ಮುಖದ ಮೇಲೆ ಏಳುವ ಮೊಡವೆಗಳು ಮತ್ತು ಕೂದಲು ಉದುರುವುದು ಅಥವಾ ಮುಖದ ಮೇಲೆ ಹೆಚ್ಚು ಕೂದಲು ಬೆಳೆಯುವುದು ಇವುಗಳ ವಿರುದ್ಧ ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಕುರಿತು ವ್ಯಾಪಕವಾಗಿ ಮಾತನಾಡಿದರು. ಈ ಮೊದಲು, ಹುಡುಗಿಯರು ಸ್ತ್ರೀರೋಗತಜ್ಞರ ಬಳಿಗೆ ಪರಿಹಾರಕ್ಕಾಗಿ ಹೋಗುತ್ತಿದ್ದರು. ಆದರೆ ಈಗ ವಿವಿಧ ಶಾಖೆಯ ಅಂದರೆ, ಸಾಮಾನ್ಯ ವೈದ್ಯರು, ಸ್ತ್ರೀರೋಗತಜ್ಞರು ಹಾಗೂ ಚರ್ಮರೋಗತಜ್ಞರು ಸಮನ್ವಯ ಮತ್ತು ಸಂಘಟಿತವಾಗಿ ಚಿಕಿತ್ಸೆಯನ್ನು ಮಾಡುವುದರಿಂದ ಸಮಸ್ಯೆಯನ್ನು ಹೇಗೆ ಸುಲಭವಾಗಿ ಮತ್ತು ಬೇಗ ಪರಿಹರಿಸುತ್ತಾರೆ ಎಂಬುದನ್ನು ಸೂಚಿಸಿದರು.

ಬಿಜಿಎಸ್ ಆಸ್ಪತ್ರೆಯಲ್ಲಿ ಅಂತಃಸ್ರಾವಶಾಸ್ತ್ರದಲ್ಲಿ ಸಲಹೆಗಾರರಾಗಿರುವ ಡಾ. ಶ್ರೀನಾಥ್ ಅಶ್ವತ್ಥಯ್ಯ ಅವರು ಈ ಸಿಂಡ್ರೋಮ್‌ನಿಂದ ಬರುವ ಮಧುಮೇಹ, ಅಧಿಕರಕ್ತದೊತ್ತಡ, ಸ್ಥೂಲಕಾಯ, ಚಯಾಪಚಯಗಳ ಕ್ರಿಯೆಯಲ್ಲಿ ಆಗುವ ಬದಲಾವಣೆಗಳು ಮತ್ತು ಇತರ ರೋಗಗಳ ಬಗೆಗೆ ಮಾತನಾಡಿದರು ಮತ್ತು ಮಹಿಳೆಯರ ದೇಹದ ಮೇಲೆ ಅಗಬಹುದಾದ ಇವುಗಳ ಪರಿಣಾಮವನ್ನೂ ವಿವರಿಸಿದರು. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ನಡೆಸಬೇಕಾದ ಚಿಕಿತ್ಸೆಯ ವಿಧಾನವನ್ನು ವಿವರಿಸುತ್ತಾ ಅವರು ಪ್ರಾರಂಭಿಕ ಹಂತಗಳಲ್ಲಿ ಈ ಸಮಸ್ಯೆಯನ್ನು ಮಾತ್ರೆಗಳು ಮತ್ತು ಚುಚ್ಚುಮದ್ದುಗಳ ಮೂಲಕವೇ ಪರಿಹರಿಸಬಹುದು ಎಂದು ತಿಳಿಸಿದರು.

ಸ್ತ್ರೀರೋಗ ಮತ್ತು ಪ್ರಸೂತಿಶಾಸ್ತ್ರ ವಿಭಾಗದಲ್ಲಿ ಅಸೋಸಿಯೇಟ್ ಪ್ರಾಧ್ಯಾಪಕರಾಗಿರುವ ಡಾ. ಜಿ. ಸೌಮ್ಯ ಅವರು ಸಮನ್ವಯಕಾರರಾಗಿದ್ದ ಸಭೆಯಲ್ಲಿ ತಜ್ಞರ ನಡುವೆ ವಿಚಾರ ವಿನಿಮಯ ನಡೆಯಿತು. ಭಾಗವಹಿಸಿದ್ದ ಅತಿಥಿ ಉಪನ್ಯಾಸಕರುಗಳಾದ ಸಿದ್ಧಗಂಗಾ ವೈದ್ಯಕೀಯ ಕಾಲೇಜಿನ ಸ್ತ್ರೀರೋಗ ಮತ್ತು ಪ್ರಸೂತಿಶಾಸ್ತ್ರ ವಿಭಾಗದ ಮುಖ್ಯಸ್ಥೆಯಾಗಿರುವ ಡಾ. ಹೇಮಾ, ಮನೋವೈದ್ಯದಲ್ಲಿ ಸಹಾಯಕ ಪ್ರಾಧ್ಯಾಪಕಿಯಾಗಿರುವ ಡಾ. ಸುಹಾ ರಿಯಾಜ್, ಚಿನ್ಮಯ ಬಂಜೆತನ ನಿವಾರಣಾ ಕೇಂದ್ರದಲ್ಲಿ ಸಲಹೆಗಾರರಾಗಿರುವ ಚಿನ್ಮಯ್ ಕುಲಕರ್ಣಿ ಅವರು ಪಾಲಿಸಿಸ್ಟಿಕ್ ಓವರಿ ಸಿಂಡ್ರೋಮ್‌ನ ರೋಗಿಗಳಿಗೆ ನೀಡಬೇಕಾದ ಚಿಕಿತ್ಸೆಯಲ್ಲಿ ವಿವಿಧ ವೈದ್ಯಕೀಯ ಶಾಖೆಗಳ ವೈದ್ಯರ ಪಾತ್ರಗಳ ಮೇಲೆ ಬೆಳಕನ್ನು ಚೆಲ್ಲಿದರು.

ತಮ್ಮ ಸಮಾಪನ ಭಾಷಣದಲ್ಲಿ ಡಾ. ರೇಖಾ ಗುರುಮೂರ್ತಿ ಅವರು ಹದಿಹರೆಯದ ಹುಡುಗಿಯರಿಂದ ಋತುಬಂಧದ ಹಂತದವರೆಗೆ ಅವರ ವಯೋಮಾನದ ವಿವಿಧ ಹಂತಗಳಲ್ಲಿ ಯಾರನ್ನು ಬೇಕಾದರೂ ಈ ಸಿಂಡ್ರೋಮ್ ಬಾಧಿಸಬಹುದು ಎಂದು ಹೇಳಿದರು. ಸ್ತ್ರೀರೋಗತಜ್ಞರನ್ನು ಕಾಡುವ ವಿಷಯವೆಂದರೆ, ಈ ಸಮಸ್ಯೆಗೆ ಒಳಗಾಗಿರುವ ಸ್ತ್ರೀಯರು ಗರ್ಭವತಿಯರಾಗುವುದರಲ್ಲಿ ಇರುವ ತೊಂದರೆಗಳನ್ನು ನಿವಾರಿಸುವುದು ಹೇಗೆ ಎಂಬುದು. ಹಾಗೊಂದು ವೇಳೆ ಗರ್ಭವತಿಯರಾದರೂ, ಶಿಶುಜನನದ ಪೂರ್ವದಲ್ಲಿ ಅವರು ಅನುಭವಿಸುವ ಮಾನಸಿಕ ಯಾತನೆಗಳನ್ನು, ಆ ಅವಧಿಗಳಲ್ಲಿ ಅವರು ಅನುಭವಿಸುವ ಅಧಿಕ ರಕ್ತದೊತ್ತಡ ಹಾಗೂ ಮಧುಮೇಹಗಳನ್ನು ನಿವಾರಿಸುವ ಕ್ರಮಗಳು ಮತ್ತು ಸಂಭವಿಸಬಹುದಾದ ಗರ್ಭಪಾತವನ್ನು ಸಂಭವಿಸದ ಹಾಗೆ ನೋಡಿಕೊಳ್ಳುವ ಕ್ರಮ, ಶಿಶುವು ಅವಧಿಪೂರ್ವ ಜನಿಸಿದರೆ ಅವುಗಳನ್ನು ನೋಡಿಕೊಳ್ಳಬೇಕಾದ ರೀತಿ ಮತ್ತು ನೀಡಬೇಕಾದ ಚಿಕಿತ್ಸೆ – ಇವುಗಳನ್ನು ಕುರಿತು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಇಂತಹ ಸಮಸ್ಯೆಗಳು ಉದ್ಭವಿಸಬಹುದು ಎಂಬುದನ್ನು ಮೊದಲೇ ಊಹಿಸಿ, ಸೂಕ್ತ ಮುನ್ನೆಚ್ಚರಿಕೆಯ ಕ್ರಮಗಳನ್ನು ತೆಗೆದುಕೊಳ್ಳುವುದು ಈ ಸಿಂಡ್ರೋಮನ್ನು ನಿಭಾಯಿಸುವುದರಲ್ಲಿ ಬಹಳಷ್ಟು ಸಹಾಯಕವಾಗುತ್ತವೆ ಎಂಬುದನ್ನೂ ಅವರು ತಿಳಿಸಿದರು.

ಈ ಸಂಕಿರಣದಲ್ಲಿ ಶ್ರೀದೇವಿ ವೈದ್ಯಕೀಯ ಕಾಲೇಜಿನ ಅಧ್ಯಾಪಕ ವರ್ಗ, ಎಂ.ಬಿ.ಬಿ.ಎಸ್ ವಿದ್ಯಾರ್ಥಿಗಳು ಕೂಡ ಭಾಗವಹಿಸಿದ್ದರು.

ಭಾಗವಹಿಸಿದ್ದವರಿಂದ ಕಾರ್ಯಕ್ರಮದ ಬಗೆಗೆ ಬಂದ ಪ್ರತಿಕ್ರಿಯೆಗಳು ಬಹಳ ಸಕಾರಾತ್ಮಕವಾಗಿದ್ದವು. ಈ ಸಿಂಡ್ರೋಮನ್ನು ನಿಭಾಯಿಸುವ ವಿಷಯದಲ್ಲಿ ತಮ್ಮ ಅನುಭವಗಳ ಮೂಲಕ ಪಡೆದ ಜ್ಞಾನವನ್ನು ಹಂಚಿಕೊಂಡಿದ್ದುದಕ್ಕಾಗಿ ಭಾಷಣಕಾರರ ಬಗೆಗೆ ಎಲ್ಲರೂ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

■ ಅನುವಾದ: ವಿ.ಕೃಷ್ಣ

## ಹಾರ್ಮೋನ್‌ಗಳ ಅಸಮತೋಲನಕ್ಕೆ ನೂತನ ಚಿಕಿತ್ಸೆ

ಹದಿಹರೆಯದ ಹೆಣ್ಣುಮಕ್ಕಳು ಸಾಮಾನ್ಯವಾಗಿ ಋತುಚಕ್ರದ ಆವರ್ತದಲ್ಲಿ ಅನಿಯತತೆಯನ್ನು ಅನುಭವಿಸುತ್ತಾರೆ. ಇದಲ್ಲದಿದ್ದರೂ, ಹೊಟ್ಟೆಯ ನೋವು, ಮೊಡವೆ, ಸ್ಥೂಲಕಾಯ, ಮಧುಮೇಹ, ಅಧಿಕ ರಕ್ತದೊತ್ತಡ ಮೊದಲಾದ ತೊಂದರೆಗಳನ್ನು ಅವರು ಅನುಭವಿಸುತ್ತಾರೆ.

ಹದಿಹರೆಯದ ಹುಡುಗಿಯರು ಮತ್ತು ಮಧ್ಯವಯಸ್ಕ ಸ್ತ್ರೀಯರಲ್ಲಿ ಹಾರ್ಮೋನುಗಳ ಅಸಮತೋಲನವು ಹಲವು ಬಗೆಯ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಇವುಗಳ ನಿವಾರಣೆಗೆ ಹೊಸದಾಗಿ ಬಂದಿರುವ ಬಹು–ಆಯಾಮದ ಚಿಕಿತ್ಸಾವಿಧಾನಗಳು ಹಲವು ರೀತಿಯಲ್ಲಿ ಹೆಚ್ಚು ಪರಿಣಾಮಕಾರಿಯಾಗಿವೆ.

ಸಾಮಾನ್ಯ ವೈದ್ಯರು ಮತ್ತು ಚರ್ಮರೋಗತಜ್ಞರು ಸಮನ್ವಯದಿಂದ ಚಿಕಿತ್ಸೆಯನ್ನು ನೀಡಿದರೆ, ಈ ಸಮಸ್ಯೆಯನ್ನು ಶೀಘ್ರವಾಗಿ ಪರಿಹರಿಸಬಹುದು ಮತ್ತು ಈ ಸಮಸ್ಯೆಯಿಂದ ಪೀಡಿತರಾದವರಲ್ಲಿ ಆತ್ಮವಿಶ್ವಾಸವನ್ನು ತುಂಬಬಹುದು ಎಂದು ತಜ್ಞವೈದ್ಯರು ಮತ್ತು ಆರೋಗ್ಯಕ್ಷೇತ್ರದಲ್ಲಿರುವ ಇತರ ತಜ್ಞರು ಅಭಿಪ್ರಾಯಪಡುತ್ತಾರೆ.


ಶ್ರೀದೇವಿ ವೈದ್ಯಕೀಯ ಕಾಲೇಜಿನ ಸಂಸ್ಥಾಪಕ–ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್ ಅವರು “ಬಹು–ಆಯಾಮದ ನವೀನ ಚಿಕಿತ್ಸಾಕ್ರಮವು ಮಹಿಳೆಯರಲ್ಲಿ ಕಂಡುಬರುವ ಹಾರ್ಮೋನುಗಳ ಅಸಮತೋಲನ, ದೇಹದಲ್ಲಿ ಶೇಖರವಾಗುವ ಅಧಿಕ ಕೊಬ್ಬು ಮೊದಲಾದವುಗಳನ್ನು ನಿವಾರಿಸುವಲ್ಲಿ ಬಹಳ ಪರಿಣಾಮಕಾರಿಯಾಗಿದೆ ಮತ್ತು ಅದರಿಂದ ದೊರಕುತ್ತಿರುವ ಲಾಭಗಳು ತೃಪ್ತಿಕರವಾಗಿವೆ. ಇಂತಹ ಸಂಕಿರಣಗಳು ವಿವಿಧ ವೈದ್ಯಕೀಯ ವಿಭಾಗಗಳವರ ಅನುಭವ ಮತ್ತು ಜ್ಞಾನವನ್ನು ಪಡೆಯುವ ಅವಕಾಶಗಳನ್ನು ವೃತ್ತಿನಿರತ ಹಾಗೂ ತರುಣ ವೈದ್ಯರಿಗೆ ಒದಗಿಸಿಕೊಡುತ್ತವೆ. ಅಲ್ಲದೆ ಈ ಕ್ಷೇತ್ರದಲ್ಲಿ ಆಗಿರುವ ನವೀನ ಆವಿಷ್ಕಾರಗಳ ಬಗೆಗೆ ಕೂಡ ಮಾಹಿತಿಯನ್ನು ಪಡೆಯಲು ಅವರಿಗೆ ಸಹಾಯಮಾಡುತ್ತವೆ” ಎಂದು ಎಂದರು.

■ ವರದಿ: ಕೆ.ಎಸ್. ರಾಜಮನ್ನಾರ್

## ನೆನಪಿನಲ್ಲಿಡಬೇಕಾದ ಮಾತು

"ಪ್ರಕೃತಿಯ ನಿಷ್ಠುರ ನಿಯಮಗಳನ್ನು ಮೀರಿ ಯಾರು ಏನೂ ಮಾಡಲಾಗುವುದಿಲ್ಲ. ಇರುವಷ್ಟು ಕಾಲ ನಮ್ಮದು. ಆಮೇಲೆ ಲೋಕವಿರುತ್ತದೆ, ನಾವು ಇರುವುದಿಲ್ಲ. ಮನುಷ್ಯನ ಪಾಲಿಗೆ ಮರಣ ದೈವದ ಕರುಣ.

ಸು.ರುದ್ರಮೂರ್ತಿಶಾಸ್ತ್ರಿ
ಖ್ಯಾತ ಕಾದಂಬರಿಗಾರರು
ಶ್ರೀಕೃಷ್ಣ ಕಾದಂಬರಿಯಿಂದ ಆಯ್ದ ಭಾಗ, ಪ್ರಕಾಶನ ಅಂಕಿತ ಪುಸ್ತಕ, ಬೆಂಗಳೂರು



# ಜೀವನಕ್ಕೆ ಭದ್ರತೆ ಮತ್ತು ಭವಿಷ್ಯಕ್ಕೆ ಸೋಪಾನ: ನರ್ಸಿಂಗ್ ಶಿಕ್ಷಣ



■ ಕೆ.ಎಸ್. ರಾಜಮನ್ನಾರ್
ಹಿರಿಯ ಪತ್ರಕರ್ತರು



ದೇಶದಲ್ಲಿ ನರ್ಸಿಂಗ್ ಶಿಕ್ಷಣ ಎದುರಿಸುತ್ತಿರುವ ಪ್ರಮುಖ ಸವಾಲು ಎಂದರೆ ನರ್ಸಿಂಗ್ ಕಾಲೇಜುಗಳಲ್ಲಿ ಇರುವ ಮೂಲಸೌಲಭ್ಯದ ಕೊರತೆ. ಹೆಚ್ಚಿನ ನರ್ಸಿಂಗ್ ಕಾಲೇಜುಗಳಲ್ಲಿ ಆಧುನಿಕ ತರಗತಿ ಕೊಠಡಿಗಳು, ಗ್ರಂಥಾಲಯಗಳು, ಆಧುನಿಕ ಮತ್ತು ಸುಸಜ್ಜಿತ ಸ್ಕಿಲ್-ಲ್ಯಾಬ್ ಸೌಲಭ್ಯ ಇಲ್ಲದಿರುವುದು ಶುಶ್ರೂಷಾ ಶಿಕ್ಷಣದ ಗುಣಮಟ್ಟದ ಮೇಲೆ ಪರಿಣಾಮ ಬೀರುತ್ತಿದೆ.

ಆದರೆ ನಿಜವಾಗಿಯೂ ಇದಕ್ಕೆ ಅಪವಾದ ಎಂಬಂತೆ ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯು ಡಾ. ಎಂ.ಆರ್ ಹುಲಿನಾಯ್ಕರ್ ಮಾರ್ಗದರ್ಶನದಲ್ಲಿ ತುಮಕೂರಿನಲ್ಲಿ ಮೂರು ಸುಸಜ್ಜಿತ ನರ್ಸಿಂಗ್ ಕಾಲೇಜುಗಳನ್ನು ಆರಂಭಿಸಿ ಉತ್ತಮ ಗುಣಮಟ್ಟದ ತರಬೇತಿಯನ್ನು ನೀಡುತ್ತಿದೆ. ಇಲ್ಲಿ ತರಬೇತಿಯನ್ನು ಪೂರೈಸಿದ ವಿದ್ಯಾರ್ಥಿಗಳು ನಮ್ಮ ದೇಶದಲ್ಲಿ ಮತ್ತು ಇತರ ದೇಶಗಳಲ್ಲಿ ಉದ್ಯೋಗಗಳನ್ನು ಪಡೆಯುತ್ತಿರುವುದೇ ಈ ಶಿಕ್ಷಣ ಸಂಸ್ಥೆಯು ಗುಣಮಟ್ಟದ ಹಾಗೂ ಇಂದಿನ ಅಗತ್ಯಕ್ಕೆ ಬೇಕಾದ ಶಿಕ್ಷಣ ಹಾಗೂ ತರಬೇತಿಯನ್ನು ನೀಡುತ್ತಿದೆ ಎಂಬುದಕ್ಕೆ ನಿದರ್ಶನವಾಗಿದೆ.

850 ಹಾಸಿಗೆಗಳ ಸುಸಜ್ಜಿತ ಆಸ್ಪತ್ರೆಯನ್ನು ಹೊಂದಿರುವ ಶ್ರೀದೇವಿ ವೈದ್ಯಕೀಯ ಕಾಲೇಜಿನಲ್ಲಿ ತರಬೇತಿ ಪಡೆಯುವ ನರ್ಸಿಂಗ್ ವಿದ್ಯಾರ್ಥಿಗಳಿಗೆ ಎಲ್ಲಾ ವಿಭಾಗದಲ್ಲಿ ಕ್ಲಿನಿಕಲ್ ತರಬೇತಿ ಮತ್ತು ಹಾಗೂ ಸ್ಕಿಲ್-ಲ್ಯಾಬ್ ತರಬೇತಿಗಳನ್ನು ಪಡೆಯುವ ತಮ್ಮ ಮತ್ತು ಕಲಿಕೆಯ ಗುಣಮಟ್ಟವನ್ನು ಉತ್ತಮಪಡಿಸಿಕೊಂಡು ವೃತ್ತಿಯಲ್ಲಿ ಪರಿಣತಿಯನ್ನು ಸಾಧಿಸುವ ಹೇರಳ ಅವಕಾಶಗಳಿವೆ. ಹೀಗಾಗಿ ಇಲ್ಲಿ ಪ್ರತಿವರ್ಷ ಅಧಿಕ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪ್ರವೇಶ ಪಡೆಯುತ್ತಿದ್ದಾರೆ. ಅದೇ ರೀತಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿ ಉದ್ಯೋಗ ಪಡೆಯುತ್ತಿದ್ದಾರೆ. ಇಲ್ಲಿ ತರಬೇತಿಯನ್ನು ಪಡೆಯುವ ವಿದ್ಯಾರ್ಥಿನಿ ಮತ್ತು ವಿದ್ಯಾರ್ಥಿಗಳಿಗಾಗಿ ಹಾಗೂ ಎನ್.ಆರ್.ಐ ವಿದ್ಯಾರ್ಥಿಗಳಿಗೆ ಪ್ರತ್ಯೇಕ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲಾಗಿದೆ. ವಿದ್ಯಾರ್ಥಿಗಳ ಅಗತ್ಯಕ್ಕೆ ತಕ್ಕಂತೆ ದಕ್ಷಿಣ ಭಾರತ, ಉತ್ತರ ಭಾರತ ಮತ್ತು ಕೇರಳ ಶೈಲಿಗಳ ತಿಂಡಿ ಮತ್ತು ಊಟೋಪಚಾರಗಳನ್ನು ನೀಡಲಾಗುತ್ತಿದೆ. ಇನ್-ಡೋರ್ ಮತ್ತು ಔಟ್-ಡೋರ್ ಆಟಗಳಿಗೆ ಅವಕಾಶ, ಟಿವಿ ರೂಂ, ತುರ್ತು ವೈದ್ಯಕೀಯ ಚಿಕಿತ್ಸೆಯ ಸೌಲಭ್ಯಗಳನ್ನು ಒದಗಿಸಲಾಗಿದೆ ಎಂದು ಶ್ರೀದೇವಿ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲ ಪ್ರೊ ಆರ್. ಕೆ .ಮುನಿಸ್ವಾಮಿ ಅವರು ಕಾಲೇಜಿನಲ್ಲಿ ಕಾಲೇಜಿನ ವತಿಯಿಂದ ಹಮ್ಮಿಕೊಂಡಿರುವ ವಿವಿಧ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳನ್ನು ಕುರಿತ ಸಂದರ್ಶನವೊಂದರಲ್ಲಿ ಈ ಮಾಹಿತಿಯನ್ನು ನೀಡಿದ್ದಾರೆ.

### ಸ್ಕಿಲ್-ಲ್ಯಾಬ್‌ನ ನುರಿತ ಸಿಬ್ಬಂದಿ

ಶ್ರೀದೇವಿ ನರ್ಸಿಂಗ್ ಕಾಲೇಜು ಅಖಿಲ ಭಾರತ ನರ್ಸಿಂಗ್ ಮಂಡಳಿ ಮತ್ತು ಕರ್ನಾಟಕ ನರ್ಸಿಂಗ್ ಮಂಡಳಿ ಹಾಗೂ ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಮಾನ್ಯತೆಗಳನ್ನು ಪಡೆದುಕೊಂಡಿದೆ. ಇಲ್ಲಿ ಡಿಪ್ಲೋಮಾ ಪದವೀಧರರು ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ಬೇರೆಬೇರೆ ರೀತಿಯ ನರ್ಸಿಂಗ್ ತರಬೇತಿ ಕೋರ್ಸ್‌ಗಳಿವೆ. ಡಿಪ್ಲೊಮೋ ವಿದ್ಯಾರ್ಥಿಗಳಿಗಾಗಿ ಜಿಎನ್‌ಎಂ ಪದವೀಧರರಿಗಾಗಿ ಬಿ.ಎಸ್.ಸಿ ನರ್ಸಿಂಗ್ ಮತ್ತು ಪಿ.ಬಿ. ನರ್ಸಿಂಗ್, ಎಂ,ಎಸ್.ಸಿ ನರ್ಸಿಂಗ್ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ಮೆಡಿಕಲ್ ಸರ್ಜಿಕಲ್ ನರ್ಸಿಂಗ್, ಪೀಡಿಯಾಟ್ರಿಕ್ ನರ್ಸಿಂಗ್, ಕಮ್ಯೂನಿಟಿ ಹೆಲ್ತ್ ನರ್ಸಿಂಗ್, ಸೈಕಿಯಾಟ್ರಿಕ್ ನರ್ಸಿಂಗ್, ಎಂ.ಎಸ್.ಸಿ ನರ್ಸಿಂಗ್ ಕೋರ್ಸ್‌ಗಳು ಲಭ್ಯವಿವೆ. ತರಬೇತಿಪಡೆದ ಬೋಧಕ ಮತ್ತು ಬೋಧಕೇತರ ವರ್ಗಗಳಿವೆ. ಆಧುನಿಕ ಸವಾಲುಗಳನ್ನು ಎದುರಿಸುವಂತಹ ಸುಸಜ್ಜಿತ ಸ್ಕಿಲ್-ಲ್ಯಾಬ್ ಇದಾಗಿದೆ. ತರಬೇತಿ ಪಡೆಯುವ ವಿದ್ಯಾರ್ಥಿಗಳಿಗೆ ಕ್ಲಿನಿಕಲ್ ಮತ್ತು ವಾರ್ಡ್‌ಗಳ ಅನುಭವಡೆಯಲು 850 ಹಾಸಿಗೆಗಳ ಸುಸಜ್ಜಿತ ಆಸ್ಪತ್ರೆಯಿದೆ. ಇದರಾಚೆಗೆ ಸಂಶೋಧನಾ ಕೇಂದ್ರವಿದೆ. ಇವುಗಳ ಒಟ್ಟು ಸಂಯೋಜನೆ ಮತ್ತು ಸೌಲಭ್ಯಗಳಿಂದ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸುವ ಪೂರಕ ವಾತವರಣವಿದೆ.

ವಿದ್ಯಾರ್ಥಿಗಳು ವೃತ್ತಿಯಲ್ಲಿನ ಸವಾಲುಗಳನ್ನು ಎದುರಿಸಲು ಅನುಕೂಲವಾಗುವಂತಹ ವಿಚಾರ ಸಂಕಿರಣಗಳು, ಸಂಪನ್ಮೂಲ ವ್ಯಕ್ತಿಗಳೊಂದಿಗೆ ನೇರಸಂವಾದಗಳನ್ನು ಹಾಗೂ ವೈದ್ಯಕೀಯ ಲೋಕದ ಆಗುಹೋಗುಗಳನ್ನು ಪರಿಚಯಿಸಿ, ಮನವರಿಕೆ ಮಾಡಿಕೊಡಲು ನಿರಂತರ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. 'ವಿಶ್ವ ಆಟಿಸಂ ಜಾಗೃತಿ ದಿನಾಚರಣೆ', 'ವಿಶ್ವಆರೋಗ್ಯ ದಿನಾಚರಣೆ', 'ಅಂತಾರಾಷ್ಟ್ರೀಯ ದಾದಿಯರ ದಿನಾಚರಣೆ', 'ವಿಶ್ವ ತಂಬಾಕುರಹಿತ ದಿನಾಚರಣೆ,' 'ವಿಶ್ವ ಪರಿಸರ ದಿನಾಚರಣೆ', 'ವಿಶ್ವ ಸ್ತನ್ಯಪಾನಸಪ್ತಾಹ', 'ಸ್ಕಿಲ್‌ಲ್ಯಾಬ್ ತರಬೇತಿ,' 'ಡೆಂಗು ಸಮೀಕ್ಷೆ', 'ಸ್ವಚ್ಛ ನೀರು', 'ಘಟಕದ ಕಾರ್ಯವೈಖರಿ', 'ವಿಶ್ವ ಕ್ಷಯರೋಗ ನಿವಾರಣಾ ದಿನಾಚರಣೆ', 'ವಿಶ್ವ ಏಡ್ಸ್ ದಿನಾಚರಣೆ,' 'ವಿಶ್ವ ಕುಷ್ಠರೋಗ ನಿವಾರಣಾ ದಿನಾಚರಣೆ' ಮುಂತಾದ ಆರೋಗ್ಯಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಕೂಡ ನಡೆಸಲಾಗತ್ತಿದೆ.

### ಭಾರತ ದರ್ಶನ ವೈಭವ !

ಸಾಮಾನ್ಯವಾಗಿ ಎಲ್ಲಾ ಶಾಲಾ ಕಾಲೇಜುಗಳಲ್ಲಿ ವಾರ್ಷಿಕೋತ್ಸವ ಆಚರಣೆಯನ್ನು ನಡೆಸಿಕೊಂಡು ಬರುವುದು ಪದ್ಧತಿ. ಆದರೆ ಇದಕ್ಕೆ ಅಪವಾದ ಎಂಬಂತೆ ಪ್ರತಿವರ್ಷ ಶ್ರೀದೇವಿ ನರ್ಸಿಂಗ್ ಮತ್ತು ರಮಣ ಮಹರ್ಷಿ ಮತ್ತು ದುರ್ಗಾಂಬ ನರ್ಸಿಂಗ್ ಕಾಲೇಜುಗಳ ವತಿಯಿಂದ ನಡೆಯುವ ಕ್ರೀಡೆ ಮತ್ತು ಸಾಂಸ್ಕೃತಿಕ ವಾರ್ಷಿಕೋತ್ಸವ ಹಾಗೂ ಜನಾಂಗೀಯ ದಿನದ (ಯತ್ನಿಕ್ ಡೇ) ಆಚರಣೆಗಳು ವಿಶೇಷವಾದುಗಳಾಗಿವೆ. ಕಳೆದ ಸೆಪ್ಟೆಂಬರ್‌ನಲ್ಲಿ ಮೂರು ದಿನ ಕಾಲೇಜು ಆವರಣದಲ್ಲಿ ಬೆಳಿಗ್ಗೆಯಿಂದ ರಾತ್ರಿಯವರೆಗೂ ವಿಶೇಷ ಕಾರ್ಯಕ್ರಮಗಳನ್ನು ಏರ್ಪಡಿಸಿ ಕೊನೆಯ ದಿನ ವಿದ್ಯಾರ್ಥಿಗಳಿಗೆ ನರ್ಸಿಂಗ್ ಪದವಿ ಪ್ರದಾನ ಮಾಡಲಾಯಿತು. ನರ್ಸಿಂಗ್ ಕಾಲೇಜುಗಳಲ್ಲಿ ರಾಜ್ಯದ ವಿದ್ಯಾರ್ಥಿಗಳಲ್ಲದೆ ಬಿಹಾರ, ತಮಿಳು ನಾಡು, ಕೇರಳ, ಮಹಾರಾಷ್ಟ್ರ ಸೇರಿದಂತೆ ಹಲವು ರಾಜ್ಯಗಳ ಹಾಗೂ ಹೊರದೇಶದ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಆಯಾ ದೇಶಗಳಿಗೇ ವಿಶಿಷ್ಟವಾದ ವೇಷ-ಭೂಷಣಗಳ ಪ್ರದರ್ಶನವು ಕಾಲೇಜಿನ ಆವರಣದಲ್ಲಿ ಭಾರತವನ್ನು ಈ ಸಂದರ್ಭದಲ್ಲಿ ಸೃಷ್ಟಿಸಿತ್ತು. ವಿದ್ಯಾರ್ಥಿಗಳಲ್ಲಿ ಸುಪ್ತವಾಗಿದ್ದ ಪ್ರತಿಭೆಯ ಅನಾವರಣಕ್ಕೆ ಕೇರಂ, ಬ್ಯಾಡ್ಮಿಂಟನ್, ವಾಲಿಬಾಲ್, ಕ್ರಿಕೆಟ್, ಖೊಖೋ, ಕಬಡ್ಡಿ, ರಂಗೋಲಿ ಸ್ಪರ್ಧೆ, ಹಾಡುಗಾರಿಕೆ, ಫ್ಯಾಶನ್ ಶೋ ಮೊದಲಾದ ಚಟುವಟಿಕೆಗಳು ಹಬ್ಬದ ವಾತವರಣಕ್ಕೆ ಮೆರುಗನ್ನು ನೀಡಿದ್ದವು.

### ದೇವರ ಸೇಗಿಂತಲೂ ಮಿಗಿಲಾದ ಸೇವೆ.!!

"ದಾದಿಯರ ಸೇವೆ ಎಂದರೆ ದೇವರ ಸೇವೆಗಿಂತಲೂ ಮಿಗಿಲಾದ ಸೇವೆ. ಹೀಗಾಗಿ ಈ ವೃತ್ತಿಯನ್ನು ಆಯ್ದುಕೊಳ್ಳುವ ವಿದ್ಯಾರ್ಥಿ-ವಿದ್ಯಾರ್ಥಿನಿಯರು ತಮ್ಮ ಸೇವೆಯಿಂದಲೇ ಸಮಾಜದಲ್ಲಿ ಗೌರವ ಪಡೆಯುವ ಅವಕಾಶವಿದೆ. ಬೇರೆ ವೃತ್ತಿಯಲ್ಲಿ ಇಲ್ಲದ ಮಾನವೀಯ ಸಂಬಂಧಗಳನ್ನು ಬೆಸೆಯುವಂತಹ ಅವಕಾಶ ಈ ವೃತ್ತಿಗಿದೆ. ನಿಸ್ವಾರ್ಥಸೇವೆಯ ಮೂಲಕ ಜನರ ಮನಸ್ಸನ್ನು ಗೆಲ್ಲಬಹುದಾಗಿದೆ ಎಂಬುದನ್ನು ಅರಿತುಕೊಂಡು ರೋಗಿಗಳ ಸೇವೆಯೇ ದೇವರ ಸೇವೆ ಎಂಬುದನ್ನು ಆಚರಣೆಯಲ್ಲಿ ತರಬೇಕು" ಎಂದು ಶ್ರೀದೇವಿ ಶಿಕ್ಷಣ ಸಮೂಹ ಸಂಸ್ಥೆಯ ಅಧ್ಯಕ್ಷ ಡಾ. ಎಂ.ಆರ್. ಹುಲಿನಾಯ್ಕರ್ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯ ಪ್ರೊ. ಕೆ.ಆರ್. ಶ್ರೀನಿವಾಸ್ ಮಾತನಾಡಿ "ಶ್ರೀದೇವಿ ವಿದ್ಯಾಸಂಸ್ಥೆಯು ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಅಡಿಯಲ್ಲಿ ಉತ್ತಮ ಕಾಲೇಜು ಎಂಬ ಖ್ಯಾತಿಯನ್ನು ಪಡೆದಿದೆ. ನುರಿತ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯಿಂದ ಗುಣಮಟ್ಟದ ಶಿಕ್ಷಣವನ್ನು ನೀಡಲಾಗುತ್ತಿದೆ. ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಹೃದಯಗಳನ್ನು ಬೆಸೆಯುತ್ತಿರುವುದು ಉತ್ತಮವಾದ ಕೆಲಸವಾಗಿದೆ" ಎಂದು ತಮ್ಮ ಮೆಚ್ಚುಗೆಯನ್ನು ಅವರು ವ್ಯಕ್ತಪಡಿಸಿದರು."

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀದೇವಿ ವೈದ್ಯಕೀಯ ನಿರ್ದೇಶಕ ಡಾ. ರಮಣ್ ಆರ್ ಹುಲಿನಾಯ್ಕರ್ ಮಾತನಾಡಿ, "ನರ್ಸಿಂಗ್ ಎಂಬುದು ಜಗತ್ತಿನಲ್ಲಿ ಮಾನವೀಯ ಗುಣಗಳನ್ನುಳ್ಳ ವೃತ್ತಿಗಳಲ್ಲಿ ಒಂದಾಗಿದೆ. ರೋಗಿಗಳಿಗೆ ಗುಣಾತ್ಮಕ ಸೇವೆಯನ್ನು ನೀಡಲು ಪ್ರತಿಯೊಬ್ಬರೂ ಸಂಕಲ್ಪ ಮಾಡಬೇಕು" ಎಂದು ಹೇಳಿದರು.

ಶ್ರೀದೇವಿ ಸಂಸ್ಥೆಯ ಮಾನವಸಂಪನ್ಮೂಲ ವಿಭಾಗದ ನಿರ್ದೇಶಕ ಎಂ.ಎಸ್. ಪಾಟೀಲ್, ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಟ್ರಸ್ಟಿ ಅಂಬಿಕಾ ಎಂ. ಹುಲಿನಾಯ್ಕರ್, ಶ್ರೀದೇವಿ ಆಸ್ಪತ್ರೆಯ ನೇತ್ರತಜ್ಞೆ ಶ್ರೀದೇವಿ ಚಾರಿಟೇಬಲ್ ಟ್ರಸ್ಟಿನ ಟ್ರಸ್ಟಿ ಡಾ. ಲಾವಣ್ಯ, ಕಾಲೇಜು ಆಡಳಿತಾಧಿಕಾರಿ ಪ್ರೊ ಟಿ,ವಿ. ಬ್ರಹ್ಮದೇವಯ್ಯ, ಶ್ರೀದೇವಿ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲ ಪ್ರೊ. ಕೆ.ಆರ್. ಮುನಿಸ್ವಾಮಿ, ರಮಣ ಮಹರ್ಷಿ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲೆ ಪ್ರೊ. ಉಷಾ ಹಾಗೂ ದುರ್ಗಾಂಬ ಸ್ಕೂಲ್ ಆಫ್ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲೆ ಡಾ. ಅಂಬಾ ಈ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

## ವಿಶ್ವದ ಮೊದಲ ನರ್ಸಿಂಗ್ ಶಾಲೆ

ವಿಶ್ವದ ಮೊದಲ ನರ್ಸಿಂಗ್ ಶಾಲೆಯು ಸ್ವಿಟ್ಜರ್ಲೆಂಡಿನಲ್ಲಿ ಕ್ರಿ.ಶ 1859ರಲ್ಲಿ ಪ್ರಾರಂಭವಾಯಿತು. ವ್ಯಾಲೆರಿ ಹಾಗೂ ಆಕೆಯ ಪತಿ ಅಜೇನರ್ ಡಿ. ಗ್ಯಾಸ್ಪರಿನ್ ಜಂಟಿಯಾಗಿ ಈ ಶಾಲೆಯನ್ನು ಪ್ರಾರಂಭಿಸಿದರು. ಇಂಗ್ಲೆಂಡಿನ ಫ್ಲಾರೆನ್ಸ್ ನೈಟಿಂಗೇಲ್ ಎಂಬ ಶ್ರೀಮಂತ ಹಾಗೂ ಸುಶಿಕ್ಷಿತ ಕುಟುಂಬದ ಹಿನ್ನಲೆಯ ಹೆಣ್ಣು ಮಗಳು ಸಾಮಾಜಿಕ ಸಂಪ್ರದಾಯಗಳನ್ನು ಧಿಕ್ಕರಿಸಿ ದಾದಿಯಾಗಲು ನಿರ್ಧರಿಸಿದರು. ಬಡವರು ಹೊಟ್ಟೆಪಾಡಿಗಾಗಿ ಭವಿಷ್ಯ ಕಂಡುಕೊಳ್ಳುವವರಷ್ಟೇ ಈ ವೃತ್ತಿಗೆ ಬರುತ್ತಾರೆ ಎಂಬಂತಹ ಹಗುರವಾದ ಟೀಕೆಗಳನ್ನು ಶತಮಾನಗಳ ಹಿಂದೆಯೇ ಅಳಿಸಿ ಹಾಕಿದ ದಿಟ್ಟ ಮಹಿಳೆ ಅವರು. ಒಬ್ಬರು ಇನ್ನೊಬ್ಬರ ಉಪಚಾರ, ಸೇವೆ ಮಾಡುವಲ್ಲಿ ಬಡತನ, ಸಿರಿತನ, ಮೇಲು-ಕೀಳು ಎಂಬ ಯಾವುದೇ ಲೆಕ್ಕಚಾರಗಳಿಗೆ ಅರ್ಥವಿಲ್ಲ ಎಂಬುದನ್ನು ಅವರು ತಮ್ಮ ಕೆಲಸದ ಮೂಲಕ ಜಗತ್ತಿಗೆ ತೋರಿಸಿಕೊಟ್ಟಿದ್ದಾರೆ. ತಮ್ಮ ವೃತ್ತಿಯ ಘನತೆ, ಗೌರವಗಳು ಎಂದೂ ಮುಕ್ಕಾಗದಂತೆ ಅವರು ನೋಡಿಕೊಂಡಿದ್ದರು.

ರೋಗಿಗಳು ಗುಣಮುಖರಾಗಿ ಆಸ್ಪತ್ರೆಯಿಂದ ಮನೆಗೆ ತೆರಳುವಾಗ ವೈದ್ಯರಿಗಿಂತಲೂ ತಮ್ಮ ಹತ್ತಿರ ನಿಂತು ಸೇವೆ ಮಾಡಿದ ದಾದಿಯರನ್ನು ನೆನೆಸಿಕೊಳ್ಳುತ್ತಾರೆ ಮತ್ತು ಅವರ ನರನಾಡಿಗಳಲ್ಲಿ ದಾದಿಯರ ಸೇವೆ ಸದಾ ಹಸಿರಾಗಿರುತ್ತದೆ.



# ಕ್ವಿನ್ ಸಿಟಿ (KWIN CITY)

▶▶ ಮೊದಲನೇ ಪುಟದಿಂದ

ಉದ್ದೇಶಿತ ಪ್ರದೇಶದ ಶೇ. 40ರಷ್ಟನ್ನು ಕೆರೆಗಳಿಗಾಗಿ, ಗಿಡಮರಗಳನ್ನು ಬೆಳಸುವುದಕ್ಕಾಗಿ ಹಾಗು ಕಟ್ಟಡಮುಕ್ತ ಪ್ರದೇಶವನ್ನಾಗಿ ಇರಿಸಲು ಮೀಸಲಾಗಿಡಲಾಗುತ್ತದೆ. ಇದರಿಂದ ಇಲ್ಲಿನ ನಿವಾಸಿಗಳಿಗೆ ಉತ್ತಮ ದರ್ಜೆಯ ಜೀವನಾವಕಾಶಗಳು ದೊರೆಯಲಿವೆ. ಇದರ ಜೊತೆಗೆ, 465 ಎಕರೆ ಪ್ರದೇಶದಲ್ಲಿ 0.69 ಮೆಗಾವ್ಯಾಟ್ ವಿದ್ಯುತ್ತನ್ನು ಉತ್ಪಾದಿಸುವ ಸೌರವಿದ್ಯುತ್ ಉತ್ಪಾದನಾ ಘಟಕವನ್ನು ಸ್ಥಾಪಿಸಲಾಗುತ್ತದೆ. ಈ ನಗರಕ್ಕೆ ಅಗತ್ಯವಾದ ವಿದ್ಯುತ್ತನ್ನು ಪೂರ್ಣಪ್ರಮಾಣದಲ್ಲಿ ಇಲ್ಲಿಯೇ ಉತ್ಪಾದಿಸಲಾಗುವುದು. ಈ ನಗರಕ್ಕೆ ಅಗತ್ಯವಾದ ನೀರನ್ನು ಒದಗಿಸಲು ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ನೀರಿನ ಪುನರ್ಬಳಕೆಮಾಡುವ ಅನುಕೂಲವನ್ನು ಒದಗಿಸಲಾಗುತ್ತದೆ. ನೀರಿನ ಒಟ್ಟು ಅಗತ್ಯದ ಶೇ. 50ರಿಂದ 70ರಷ್ಟನ್ನು ಪುನರ್ಬಳಕೆಯ ವ್ಯವಸ್ಥೆಯೇ ಪೂರೈಸುತ್ತದೆ. ಇದಲ್ಲದೆ, ಮಳೆನೀರಿನ ಸಂಗ್ರಹವನ್ನು ಮಾಡುವುದರ ಜೊತೆಗೆ, ಅಂತರ್ಜಲದ ಮಟ್ಟವನ್ನು ಹೆಚ್ಚಿಸುವ ಹಾಗು ಹರಿದು ಹೋಗುವ ಮಳೆಯ ನೀರನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ಇಂಗುಗುಂಡಿಗಳನ್ನು ನಿರ್ಮಿಸಲಾಗುವುದು ಮತ್ತು ನೀರನ್ನು ಹೀರಿಕೊಳ್ಳುವ ವಸ್ತುಗಳನ್ನು ಬಳಸಲಾಗುವುದು. ಇದರಿಂದ ಇಲ್ಲಿನ ಒಟ್ಟಾರೆ ಪ್ರದೇಶದಲ್ಲಿ ಒಂದು ಹನಿ ನೀರೂ ವ್ಯರ್ಥವಾಗದ ಹಾಗೆ ನೋಡಿಕೊಳ್ಳಲಾಗುವುದು.

ಇಷ್ಟಲ್ಲದೆ, ಈ ನಗರ ಪ್ರದೇಶದ ಒಳಗೇ ತರಕಾರಿ ಮತ್ತು ಹಣ್ಣುಗಳನ್ನು ಬೆಳೆಯಲು 200 ಎಕರೆಯಷ್ಟು ಪ್ರದೇಶವನ್ನು ಮೀಸಲಿಡಲಾಗುವುದು. ಇಲ್ಲಿ ವಾರ್ಷಿಕವಾಗಿ ಸುಮಾರು 7000 ಟನ್ನುಗಳಷ್ಟು ತರಕಾರಿ ಮತ್ತು ಹಣ್ಣುಗಳನ್ನು ಬೆಳೆಯಲಾಗುವುದು.

ಪರಿಸರ ಸಂರಕ್ಷಣೆಯ ದೃಷ್ಟಿಯಿಂದ ಬೈಸಿಕಲ್ಲು ಹಾಗೂ ಮೋಟಾರ್ ಬೈಕುಗಳಿಗಾಗಿ ಪ್ರತ್ಯೇಕವಾದ ಮಾರ್ಗಗಳನ್ನು ನಿರ್ಮಿಸಲಾಗುವುದು ಮತ್ತು ನಗರದ ಒಳಭಾಗದಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ 15 ನಿಮಿಷಗಳ ಒಳಗೆ ಹೋಗಲು ಅನುಕೂಲವಾಗುವಂತೆ ಮಾನೋರೈಲಿನ ಸೌಕರ್ಯವನ್ನೂ ಒದಗಿಸಲಾಗುವುದು.

**ಶಿಕ್ಷಣ ಮತ್ತು ಆರೋಗ್ಯರಕ್ಷಣೆ:**

ಕ್ವಿನ್ ಸಿಟಿಯ ಉದ್ದೇಶಿತ ಯೋಜನೆಯು ಶಿಕ್ಷಣ ಮತ್ತು ಆರೋಗ್ಯರಕ್ಷಣೆಗೆ ಹೆಚ್ಚಿನ ಮಹತ್ತ್ವವನ್ನು ನೀಡುತ್ತದೆ. ಮೊದಲ ಹಂತದಲ್ಲಿ, ವಿಶ್ವದರ್ಜೆಯ ಶಿಕ್ಷಣ ಸಂಸ್ಥೆಗಳಿಗೆ ಆದ್ಯತೆಯನ್ನು ಇಲ್ಲಿ ನೀಡಲಾಗುವುದು ಮತ್ತು ಈ ಉದ್ದೇಶಕ್ಕಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಉತ್ತಮ ಗುಣಮಟ್ಟವನ್ನು ಕಾಪಾಡಿಕೊಂಡು ಬರುತ್ತಿರುವ ವಿಶ್ವವಿದ್ಯಾನಿಲಯಗಳು ಇಲ್ಲಿ ತಮ್ಮ ಕ್ಯಾಂಪಸ್‌ಗಳನ್ನು ತೆರೆಯುವಂತೆ ಅವುಗಳನ್ನು ಆಹ್ವಾನಿಸಲಾಗುತ್ತದೆ. ಇಲ್ಲಿಗೆ ಜಗತ್ತಿನ ಎಲ್ಲ ಕಡೆಯಿಂದಲೂ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಆಕರ್ಷಿತರಾಗುವಂತೆ ಮಾಡುವ ದೃಷ್ಟಿಯನ್ನು ಈ ಯೋಜನೆ ಹೊಂದಿದೆ.



ಮುಂದಿನ ಹಂತಗಳಲ್ಲಿ, ಇಲ್ಲಿ ಉತ್ತಮ ದರ್ಜೆಯ ಆಸ್ಪತ್ರೆಗಳನ್ನು, ವೈದ್ಯಕೀಯ ಸಂಶೋಧನ ಸಂಸ್ಥೆಗಳನ್ನು ಸ್ಥಾಪಿಸಿ ಇದನ್ನು ವೈದ್ಯಕೀಯ ಸೌಲಭ್ಯಗಳಿಗಾಗಿ ದೇಶ–ವಿದೇಶಗಳಿಂದ ಜನರನ್ನು ಆಕರ್ಷಿಸುವ ಕೇಂದ್ರವನ್ನಾಗಿಸುವ ಯೋಜನೆಗಳಿವೆ. ಶಿಕ್ಷಣ ಮತ್ತು ವೈದ್ಯಕೀಯ ಸೌಲಭ್ಯಗಳಿಂದಾಗಿ ಇದು ಜ್ಞಾನದ ಹಾಗೂ ಸಂಶೋಧನೆಯ ಒಂದು ಒಳ್ಳೆಯ ಕೇಂದ್ರವಾಗಿ ಹೆಸರನ್ನು ಪಡೆಯಲಿದೆ.

**ಆರ್ಥಿಕತೆ ಹಾಗೂ ಉದ್ಯೋಗಾವಕಾಶಗಳ ಮೇಲೆ ಆಗಲಿರುವ ಪ್ರಭಾವ:**

ಈ ನಗರವು ಆರ್ಥಿಕವಾಗಿ ಶಕ್ತಿಯುತವಾಗಿ ಬೆಳೆಯಲಿದೆ. ಇದು ಸುಮಾರು 40,000 ಕೋಟಿ ಬಂಡವಾಳವನ್ನು ಆಕರ್ಷಿಸುವ ಸಾಮರ್ಥ್ಯವನ್ನು ಹೊಂದಿರುವ ನಿರೀಕ್ಷೆಯಿದೆ. ಈ ಬಂಡವಾಳದ ವಿನಿಯೋಗ ಕ್ಷೇತ್ರಗಳು ಹಲವಾರು ಇದ್ದು, ಅವುಗಳಲ್ಲಿ ತಂತ್ರಜ್ಞಾನ, ಉತ್ಪಾದನೆ, ಆರೋಗ್ಯ ಮತ್ತು ಶಿಕ್ಷಣಕ್ಷೇತ್ರಗಳು ಸೇರಿವೆ.

ಕ್ವಿನ್ ಸಿಟಿಯ ಯೋಜನೆಯು ಸರ್ಕಾರ, ಕೈಗಾರಿಕೆಯಲ್ಲಿನ ಪರಿಣತರು ಮತ್ತು ಶೈಕ್ಷಣಿಕ ಸಂಸ್ಥೆಗಳ ಸಹಭಾಗಿತ್ವವನ್ನು ಹೊಂದಿರುತ್ತದೆ. ಈಗಾಗಲೇ ಈ ಯೋಜನೆಯಲ್ಲಿ ಹಲವಾರು ಪ್ರಮುಖರು, ವಿವಿಧ ಕೈಗಾರಿಕೆಗಳ ದಿಗ್ಗಜಗಳು ತಮ್ಮ ಆಸಕ್ತಿಯನ್ನು ವ್ಯಕ್ತಪಡಿಸಿದ್ದಾರೆ. ಇದು ಇತ್ತೀಚೆಗೆ ನಡೆದ ಸಮಾರಂಭದಲ್ಲಿ ತಿಳಿದುಬಂದಿತು. ಮುಂದಾಳುಗಳು ಈ ಸಮಾರಂಭದಲ್ಲಿ ಉತ್ಸಾಹದಿಂದ ಭಾಗವಹಿಸಿದುದನ್ನು ನೋಡಿದರೆ, ಈ ನಗರದ ಪ್ರಾಮುಖ್ಯವು ನಮ್ಮ ಅರಿವಿಗೆ ಬರುತ್ತದೆ.

**ಮುಂದಿನ ಹಾದಿ:**

ಅತ್ಯಾಧುನಿಕ ತಂತ್ರಜ್ಞಾನ ಮತ್ತು ನವೀನ ಆವಿಷ್ಕಾರಗಳ ನೆರವಿನಿಂದ ಕ್ವಿನ್ ಸಿಟಿಯು ಮುಂದಿನ ದಿನಗಳಲ್ಲಿ ನಗರಾಭಿವೃದ್ಧಿಯ ನಿಟ್ಟಿನಲ್ಲಿ ಬಹು ದೊಡ್ಡ ಮಾದರಿಯಾಗಿ ಮಿಂಚಲಿದೆ. ಮುಂದುವರಿದಂತೆ, ಈ ಯೋಜನೆಯು ಕೈಗಾರಿಕೆಗಳ ಬೆಳವಣಿಗೆಗೆ ಉತ್ತಮ ಅವಕಾಶಗಳನ್ನು ಸೃಷ್ಟಿಸುತ್ತದೆ. ಇದಲ್ಲದೆ, ಶಿಕ್ಷಣ, ಆರೋಗ್ಯ ಮತ್ತು ಪರಿಸರದ ರಕ್ಷಣೆ, ಈ ಎಲ್ಲಾ ದೃಷ್ಟಿಯಿಂದಲೂ ಈ ನಗರವು ದಾಪುಗಾಲನ್ನು ಇಡಲಿದೆ. ಇಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಸಂಕಿರಣಗಳನ್ನು ನಡೆಸುವುದಕ್ಕೆ ಅಗತ್ಯವಾದ ಎಲ್ಲಾ ಸೌಲಭ್ಯಗಳೂ ದೊರೆಯಲಿವೆ.

ಈ ನಗರವು ಆಯಕಟ್ಟಿನ ಜಾಗದಲ್ಲಿ ಬರುತ್ತಿವುದರಿಂದಾಗಿ ಮತ್ತು ಮುಂದಾಲೋಚನೆಯಿಂದ ಸಿದ್ಧಪಡಿಸಿದ ಯೋಜನೆಯ ರೂಪುರೇಖೆಗಳಿಂದಾಗಿ ಸದ್ಯದಲ್ಲಿಯೇ ಪ್ರತಿಭೆಗಳ, ಸಂಶೋಧನೆ ಮತ್ತು ಆವಿಷ್ಕಾರಗಳ ತವರುಮನೆಯಾಗಿ ಜಾಗತಿಕವಾಗಿ ಪ್ರಸಿದ್ಧವಾಗಲಿದೆ. ಈ ನಗರವನ್ನು ಕುರಿತ ಹೆಚ್ಚಿನ ಮಾಹಿತಿಯನ್ನು ಅಂತರ್ಜಾಲ kwincity.com ದಿಂದ ಪಡೆಯಬಹುದು.

"ನಮ್ಮ ರಾಜ್ಯದ ರಾಜಧಾನಿಯಾದ ಬೆಂಗಳೂರು ಕೈಗಾರಿಕೆಗಳ ಅಭಿವೃದ್ಧಿಗೆ ಅಪಾರವಾದ ಸಾಮರ್ಥ್ಯವನ್ನು ಹೊಂದಿದ್ದು ಈಗ ರೂಪಗೊಳ್ಳುತ್ತಿರುವ ಕ್ವಿನ್ ಸಿಟಿಯ ಯೋಜನೆಯು ಈ ಸಾಮರ್ಥ್ಯವನ್ನು ಮತ್ತಷ್ಟು ಹೆಚ್ಚಿಸುತ್ತದೆ. ಈ ನಗರದಲ್ಲಿ ಜೀವವಿಜ್ಞಾನಕ್ಕೆ, ಸೆಮಿಕಂಡಕ್ಟರ್ ಉತ್ಪಾದನೆಗೆ ಸಂಬಂಧಿಸಿದ ಮತ್ತು ಇತರ ಹಲವು ಅತ್ಯಾಧುನಿಕ ಉದ್ಯಮಗಳು, ದೊಡ್ಡ ಸಂಸ್ಥೆಗಳ ಕಾರ್ಪೊರೇಟ್‌ಗಳ ಕಚೇರಿಗಳು ಇಲ್ಲಿ ನೆಲಸಲಿವೆ. ಪ್ರತಿದಿನ 760 ದಶಲಕ್ಷ ಲೀಟರ್ ನೀರನ್ನು ಬೆಂಗಳೂರಿಗೆ ಒದಗಿಸುವ ಕಾವೇರಿ ಜಲಯೋಜನೆಯ ಐದನೆಯ ಹಂತವನ್ನು ಕಾರ್ಯರೂಪಕ್ಕೆ ತರುತ್ತಿರುವುದು ಸರ್ಕಾರವು ಬೆಂಗಳೂರಿನ ನೀರಿನ ಸಮಸ್ಯೆಯ ವಿಷಯದಲ್ಲಿ ಎಷ್ಟು ಬದ್ಧತೆಯನ್ನು ಹೊಂದಿದೆ ಎಂಬುದನ್ನು ತೋರಿಸುತ್ತದೆ. ಯಲಹಂಕದಲ್ಲಿ ತಲೆಯೆತ್ತುತ್ತಿರುವ ಸಂಯೋಜಿತ ಆವರ್ತ ವಿದ್ಯುತ್ ಸ್ಥಾವರವು ಬೆಂಗಳೂರಿಗೆ ತಡೆಯಿಲ್ಲದ ವಿದ್ಯುತ್ತನ್ನು ಸರಬರಾಜು ಮಾಡಲಿದೆ. ಸಂಚಾರವ್ಯವಸ್ಥೆಯ ಸಮಸ್ಯೆಯನ್ನು ನಾವು ಶೀಘ್ರವೇ ಪರಿಹರಿಸಲಿದ್ದೇವೆ"

– ಡಿ.ಕೆ. ಶಿವಕುಮಾರ್,
ಮಾನ್ಯ ಉಪಮುಖ್ಯಮಂತ್ರಿ ಮತ್ತು
ಬೆಂಗಳೂರು ನಗರಾಭಿವೃದ್ಧಿ ಸಚಿವರು

"ಸಿಂಗಪುರದ ಬಯೋಪೊಲಿಸ್, ಅಮೆರಿಕದ ರಿಸರ್ಚ್ ಟ್ರೈಯಾಂಗಲ್ ಪಾರ್ಕ್, ಜಪಾನಿನ ಕೆಬಿಐಸಿ, ಮತ್ತು ಬೋಸ್ಟನ್‌ನ ಅತ್ಯಾಧುನಿಕ ಸಂಕೀರ್ಣ – ಇವುಗಳಿಂದ ಕ್ವಿನ್ ಸಿಟಿಯು ಸ್ಫೂರ್ತಿಯನ್ನು ಪಡೆದು ರೂಪಗೊಳ್ಳುತ್ತಿದೆ. ಕರ್ನಾಟಕ ರಾಜ್ಯವು ಎಂದುನಿಂದಲೂ ಕೈಗಾರಿಕೆಗಳ ನೆಚ್ಚಿನ ಕೇಂದ್ರವಾಗಿ ಮುಂದುವರಿದುಕೊಂಡು ಬಂದಿದೆ. ಇದಕ್ಕೆ ಮೈಸೂರಿನ ರಾಜರು ಮುಂದಾಲೋಚನೆಯಿಂದ ತೆಗೆದುಕೊಂಡ ಕ್ರಮಗಳು ಕಾರಣವಾಗಿದ್ದು, ನಾವು ಅವರಿಗೆ ಎಂದೆಂದಿಗೂ ಕೃತಜ್ಞರಾಗಿರಬೇಕು. ಆವರು ಹಾಕಿಕೊಟ್ಟ ಅಭಿವೃದ್ಧಿಯ ಹಾದಿಯಲ್ಲಿಯೇ ನಾವು ಇಂದೂ ಸಾಗುತ್ತಿದ್ದೇವೆ."

– ಎಮ್.ಬಿ. ಪಾಟೀಲ್,
ಮಾನ್ಯ ಮೂಲಸೌಕರ್ಯಗಳ ಅಭಿವೃದ್ಧಿ
ಮತ್ತು ಬೃಹತ್ ಹಾಗೂ ಮಧ್ಯಮ
ಕೈಗಾರಿಕೆಗಳ ಸಚಿವರು.

### ವಿವಿಧ ರಾಜ್ಯಗಳಿಂದ ಸಾವಿರ ವಿದ್ಯಾರ್ಥಿಗಳು ಭಾಗವಹಿಸುವಿಕೆ

## ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನಿಂದ ಪ್ರತಿಭಾನ್ವೇಷಣೆಗಾಗಿ ರಾಷ್ಟ್ರಮಟ್ಟದ 24 ಗಂಟೆಗಳ ಹ್ಯಾಕಥಾನ್

ರಾಜ್ಯ ಮತ್ತು ಹೊರ ರಾಜ್ಯಗಳ ಇಂಜಿನಿಯರಿಂಗ್ ವಿದ್ಯಾರ್ಥಿಗಳ ಪ್ರತಿಭಾನ್ವೇಷಣೆಗಾಗಿ ರಾಷ್ಟ್ರಮಟ್ಟದ ಹ್ಯಾಕಥಾನ್ ಕಾರ್ಯಾಗಾರವನ್ನು ತುಮಕೂರಿನ ಪ್ರತಿಷ್ಠಿತ ಶ್ರೀದೇವಿ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ ಮತ್ತು ಶ್ರೀಟೆಕ್ ಇನೋವೆಷನ್ ಜಂಟಿ ಸಹಯೋಗದಲ್ಲಿ ಇದೇ ತಿಂಗಳು 29 ಮತ್ತು 30 ರಂದು ಆಯೋಜಿಸಲಾಗಿದೆ.

ಪರಿಸರ, ಆರೋಗ್ಯ ಮತ್ತು ಕೃಷಿ ವಲಯಕ್ಕೆ ಮಹತ್ವದ ಕೊಡುಗೆ ನೀಡುವ ಅಭಿಲಾಷೆಯಿಂದ 24 ಗಂಟೆಗಳ ನಿರಂತರ ಕಾರ್ಯಾಗಾರವನ್ನು ಸಂಪನ್ಮೂಲ ವ್ಯಕ್ತಿಗಳು, ಕೈಗಾರಿಕಾ ವಲಯದ ಪರಿಣಿತರು ಹಾಗೂ ಪ್ರತಿಷ್ಠಿತ ಐಟಿ–ಬಿಟಿ ಕಂಪನಿಗಳ ಸಮಾಗಮದಲ್ಲಿ, ಹಮ್ಮಿಕೊಳ್ಳಲಾಗಿದೆ.

ಯುವಜನಾಂಗದ ಪ್ರತಿಭೆ ರಾಜ್ಯದ ಪ್ರಗತಿಗೆ ವರದಾನವಾಗಬೇಕು ಎಂಬುದೇ ಕಾರ್ಯಾಗಾರದ ತುಡಿತವಾಗಿದೆ. ವಿವಿಧ ವಲಯಗಳ ಉನ್ನತಮಟ್ಟದ ತೀರ್ಪುಗಾರರ ಸಮಿತಿ ವಿದ್ಯಾರ್ಥಿಗಳ ಅವಿಷ್ಕಾರವನ್ನು ಪರಿಶೀಲಿಸಿ ಬಹುಮಾನ ಘೋಷಿಸಲಿದ್ದಾರೆ. ಪ್ರಥಮ ಬಹುಮಾನ 50 ಸಾವಿರ, ದ್ವಿತೀಯ ಬಹುಮಾನ 30 ಸಾವಿರ ಹಾಗೂ 20 ಸಾವಿರ ತೃತೀಯ ಬಹುಮಾನ ನೀಡಲಾಗುತ್ತದೆ. ಭಾಗವಹಿಸಿದ ಎಲ್ಲಾ ಅಭ್ಯರ್ಥಿಗಳಿಗೂ ಪ್ರಮಾಣ ಪತ್ರ ನೀಡಲಾಗುತ್ತದೆ.




ವಿದ್ಯಾರ್ಥಿಗಳ ಸಮುದಾಯಕ್ಕೆ ಒದಗಿಬಂದಿರುವ ಅಪೂರ್ವ ಸುವರ್ಣ ಅವಕಾಶವನ್ನು ಪ್ರತಿಯೊಬ್ಬ ವಿದ್ಯಾರ್ಥಿಯೂ ಸದುಪಯೋಗಪಡಿಸಿಕೊಳ್ಳುವಂತೆ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಡಾ.ಎಂ.ಆರ್.ಹುಲಿನಾಯ್ಕರ್ ಮನವಿ ಮಾಡಿದ್ದಾರೆ.

ಕಾರ್ಯಾಗಾರವನ್ನು ಅಕ್ಟೋಬರ್ 29ರಂದು ಕರ್ನಾಟಕ ರಾಜ್ಯದ ಪೊಲೀಸ್ ಮಹಾ ನಿರ್ದೇಶಕರಾದ ಡಾ.ಪ್ರಣವಮೊಹಂತಿ ಅವರು ಉದ್ಘಾಟನೆ ಮಾಡಲಿದ್ದಾರೆ. ಅಕ್ಟೋಬ್ರ್ 30ರಂಡು ನಿವೃತ್ತ ಅಪರ ಮುಖ್ಯಕಾರ್ಯದರ್ಶಿ ಹಾಗೂ ಕರ್ನಾಟಕ ರಾಜ್ಯ ಕೌಶಲ್ಯಾಭಿವೃದ್ಧಿ ಮಂಡಲಿಯ ಮ್ಯಾನೇಜಿಂಗ್ ಡೈರಕ್ಟರ್ ಡಾ.ಇ.ವಿ.ರಮಣರೆಡ್ಡಿ ಅವರು ವಿಜೇತ ಸ್ಪರ್ದೆಗಳಿಗೆ ಬಹುಮಾನ ವಿತರಣೆ ಮಾಡಲಿದ್ದಾರೆ.

■ ವರದಿ: ಎನ್. ಆನಂದ

# ಕರ್ನಾಟಕದ ಪ್ರಾತಃಸ್ಮರಣೀಯರು ಕುದ್ಮುಲ್ ರಂಗರಾವ್



■ ಡಾ.ಕೆ.ಆರ್.ಕಮಲೇಶ್
ಸಂಪಾದಕರು

## ಕರಾವಳಿಯಲ್ಲಿ ಉದಯಿಸಿದ ದಲಿತರ ರಕ್ಷಕರು

1991 ಇರಬಹುದು. ಅಂದು ಶಿಕ್ಷಣ ಸಚಿವರಾಗಿದ್ದ ಎಂ. ವೀರಪ್ಪ ಮೊಯ್ಲಿ ಅವರು ಕೊರಗರ ಬದುಕು ಮತ್ತು ಸಂಸ್ಕೃತಿಯನ್ನು ಕುರಿತು ಕಾದಂಬರಿಯನ್ನು ಬರೆಯುತ್ತಿದ್ದರು. ಆ ಕಾದಂಬರಿಗೆ ಬೇಕಾದ ಕೆಲವು ಮಾಹಿತಿಗಳನ್ನು ಸಂಗ್ರಹಿಸಲು ನಾನು ಕಾವೇರಿ ಭವನದಲ್ಲಿದ್ದ ಕರ್ನಾಟಕರಾಜ್ಯ ಗೆಸೆಟಿಯರ್ ಇಲಾಖೆಗೆ ಹೋಗಿದ್ದೆ. ಆಗ ಅಲ್ಲಿ ಗೆಸೆಟಿಯರ್‌ನ ಮುಖ್ಯ ಸಂಪಾದಕರಾಗಿದ್ದವರು ಖ್ಯಾತ ಇತಿಹಾಸಕಾರರಾಗಿದ್ದ ಡಾ. ಸೂರ್ಯನಾಥ ಕಾಮತ್. ಅವರು ನನ್ನ ಉದ್ದೇಶವನ್ನು ತಿಳಿದು ಕೆಲವು ಮಾಹಿತಿಗಳನ್ನು ಸ್ವಯಂಪ್ರೇರಣೆಯಿಂದ ನೀಡಿದರು. "ಕುದ್ಮುಲ್ ರಂಗರಾವ್ 1900ರಲ್ಲಿ ಕೊರಗರ ಮಕ್ಕಳಿಗಾಗಿ ದಕ್ಷಿಣ ಕನ್ನಡ ಜಿಲ್ಲೆಯ ಅನೇಕ ಕಡೆ ಶಾಲೆ ತೆರೆದರು. ಆ ಶಾಲೆಯನ್ನು ತೆರೆಯಲು ಅವರು ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಕುದ್ಮುಲ್ ರಂಗರಾವ್ ಅವರು ಸಾರಸ್ವತ ಬ್ರಾಹ್ಮಣ ಸಮುದಾಯದವರು. ದೈವಭಕ್ತರು. ಆ ಕಾಲದಲ್ಲಿ ಜಾತಿ, ಧರ್ಮ, ಸಂಪ್ರದಾಯಗಳೇ ಸಮಾಜವನ್ನು ನಿಯಂತ್ರಿಸುತ್ತಿದ್ದವು. ಅಂತಹ ಸಂದರ್ಭದಲ್ಲಿ ಕುದ್ಮುಲ್ ರಂಗರಾವ್ ಅವರು ದಲಿತರಿಗೆ ಮಾಡಿದ ಸೇವೆ ತುಂಬಾ ದೊಡ್ಡದು. ದಲಿತರ ವಿಚಾರದಲ್ಲಿ ಅವರಿಗಿದ್ದ ಬದ್ಧತೆಯ ಬಗ್ಗೆ ಒಂದು ಸಂಗತಿಯನ್ನು ಹೇಳಬೇಕಾಗಿದೆ. 1920–21ರಲ್ಲಿ ದಲಿತ ಯುವಕನೊಬ್ಬ ಬಿಳಿಬಟ್ಟೆ ಧರಿಸಿ, ಚಪ್ಪಲಿ ಹಾಕಿಕೊಂಡು ಉಡುಪಿಯ ರಥಬೀದಿಯಲ್ಲಿ ಹೋಗುತ್ತಿದ್ದ. ಆಗ ಅವನ ಮೇಲೆ ಮೇಲ್ವರ್ಗದವರು ಹಲ್ಲೆ ಮಾಡಿದರು. ದಲಿತ ಯುವಕ ತಲೆಕೆಡಿಸಿಕೊಳ್ಳದೆ ಮುಂದೆ ಹೋದ. ಆದರೆ ಕುದ್ಮುಲ್ ರಂಗರಾವ್ ಅವರು ಅದನ್ನು ಅಷ್ಟಕ್ಕೆ ಬಿಡದೆ ಈ ಪ್ರಕರಣವನ್ನು ಪ್ರಿವಿ ಕೌನ್ಸಿಲ್ ತನಕ ತೆಗೆದುಕೊಂಡು ಹೋಗಿ ಹಲ್ಲೆಮಾಡಿದವರಿಗೆ ಶಿಕ್ಷೆಯನ್ನು ಕೊಡಿಸಿದರು. ಅವರ ಬಗ್ಗೆ ಸಾಕಷ್ಟು ವಿವರಗಳು ಬಾಂಬೆ ಗೆಸೆಟಿಯರ್‌ನಲ್ಲಿ ದಾಖಲಾಗಿದೆ." ಡಾ. ಸೂರ್ಯನಾಥ ಕಾಮತ್ ಹೇಳಿದ ಈ ಎಲ್ಲ ವಿಚಾರಗಳು ಡಾ. ವೀರಪ್ಪ ಮೊಯ್ಲಿ ಅವರ ಕೊಟ್ಟ ಕಾದಂಬರಿಯಲ್ಲಿ ಕಲಾತ್ಮಕವಾಗಿ ನಿರೂಪಿತವಾಗಿವೆ. ಆ ಕಾದಂಬರಿಯಲ್ಲಿ ಕುದ್ಮುಲ್ ರಂಗರಾವ್ ಅವರು ಸಹ ಒಂದು ಪಾತ್ರ.

## ಕನ್ನಡಭಾಷೆಯಲ್ಲೂ ಕುದ್ಮುಲ್‌ರ ಗ್ರಂಥ

ಇತ್ತೀಚಿಗೆ ಮಿತ್ರರಾದ ಸಾಗರ್ ಅವರು ಪ್ರೇಮಿ ಎಂ ರಾವ್ ಮತ್ತು ಪಾಂಡುರಂಗ ರಾವ್ ಅವರು ಇಂಗ್ಲಿಷ್‌ನಲ್ಲಿ ಬರೆದ ಗ್ರಂಥವನ್ನು ಬಿ.ಎ. ವಿವೇಕ ರೈ ಅವರು ಕನ್ನಡಕ್ಕೆ ಅನುವಾದದಿಸಿದ್ದಾರೆ ಎಂಬುದನ್ನು ತಿಳಿಸಿದರು. ಅದರ ಶೀರ್ಷಿಕೆ 'ನೀವು ಕಂಡರಿಯದ ಕುದ್ಮುಲ್ ರಂಗರಾವ್'. ಈ ಗ್ರಂಥವನ್ನು ಬೆಂಗಳೂರಿನ ಬಹುರೂಪಿ ಪ್ರಕಾಶನದವರು ಪ್ರಕಟಿಸಿದ್ದಾರೆ. ಈ ಗ್ರಂಥದ 143 ಪುಟಗಳಲ್ಲಿ ಕುದ್ಮುಲ್ ರಂಗರಾಯರ ಸಮಗ್ರ ವ್ಯಕ್ತಿತ್ವವನ್ನು ಪರಿಚಯಿಸುವ ಕೆಲಸವನ್ನು ಮಾಡಲಾಗಿದೆ. ಈ ಗ್ರಂಥ ರಚನೆಯಕಾರರು ಕುದ್ಮುಲ್ ರಂಗರಾವ್ ಅವರ ಸಂತತಿಯವರೇ ಆದ ಕಾರಣ ವಿಶೇಷವಾದ ಮಾಹಿತಿಯನ್ನು ಇದರಲ್ಲಿ ಕಾಣಬಹುದು.


ಭಾರತೀಯ ಸಮಾಜದಲ್ಲಿ ಇಂತಹ ವ್ಯಕ್ತಿಗಳು ಕಾಲದಿಂದ ಕಾಲಕ್ಕೆ ಜನಿಸಿದ ಕಾರಣಕ್ಕಾಗಿ ಈ ಸಮಾಜವು ಇನ್ನೂ ನಿಂತ ನೀರಾಗಿಲ್ಲ. ವೇಗವಾಗಿ ಹರಿಯುವ ನದಿಯಾಗದಿದ್ದರೂ ಕಿರುಪ್ರಮಾಣದ ಜರಿಯಂತೆ ಭಾರತೀಯ ಸಮಾಜ ಸದಾ ಹೊಸತನಕ್ಕೆ ಒಗಿಕೊಳ್ಳುವ, ಚಿಂತಿಸುವ ಪ್ರಯತ್ನ ಮಾಡುತ್ತಿದೆ. ಈಗ್ಗೆ 125 ವರ್ಷಗಳ ಹಿಂದೆಯೇ ದಲಿತಸಮಾಜಕ್ಕೆ ನ್ಯಾಯವನ್ನು ದೊರಕಿಸಿ ಕೊಡಬೇಕು ಎನ್ನುವ ಕುದ್ಮುಲ್ ರಂಗರಾವ್ ಅವರ ಇಚ್ಛಾಶಕ್ತಿಯನ್ನು ನೆನೆದರೆ ಆಶ್ಚರ್ಯ ಉಂಟಾಗುತ್ತದೆ. ಕುದ್ಮುಲ್ ರಂಗರಾವ್ ಅವರ ಬಗೆಗಿನ ಈ ಗ್ರಂಥದ ಸೂಕ್ಷ್ಮ ಪರಿಚಯ ಇಲ್ಲಿದೆ.

## ಕುದ್ಮುಲ್‌ರ ಪ್ರಾರಂಭದ ದಿನಗಳು

ಬೆನ್ ಜಾನ್‌ಸನ್ ಎಂಬಾತ 'The Memory of Shakespeare' ಎನ್ನುವ ಗ್ರಂಥದಲ್ಲಿ "ಮಹಾತ್ಮರು ಒಂದು ಯುಗಕ್ಕೆ ಸೀಮಿತವಾದವರಲ್ಲ, ಅವರು ಎಲ್ಲ ಯುಗಗಳಲ್ಲೂ ಇರುವವರು ಅವರ ಕಾರ್ಯಗಳನ್ನು ನೋಡಲು ನಾವು ಸಿದ್ಧರಾಗಿರಬೇಕು" ಎನ್ನುತ್ತಾರೆ. ಈ ಮಾತು ಅಕ್ಷರಶಃ ನಿಜ. ಮಹಾತ್ಮ ಎಂದರೆ ಯಾರು ಎನ್ನುವ ಪ್ರಶ್ನೆಗೆ ಸುಲಭದಲ್ಲಿ ಹೇಳುವುದಾದರೆ 'ಎಲ್ಲ ಮನುಷ್ಯರನ್ನು ಒಂದೇ ಎಂಬಂತೆ ಭಾವಿಸುವ, ಪರರ ಕಷ್ಟಗಳನ್ನು ತನ್ನದೆಂದು ಎಂದು ತಿಳಿದು ಅದರ ಪರಿಹಾರಕ್ಕಾಗಿ ದುಡಿಯುವ ವ್ಯಕ್ತಿ ಮಹಾತ್ಮರಾಗುತ್ತಾರೆ.'


ಭಗವಾನ್ ಬುದ್ಧ, ಯೇಸು ಕ್ರಿಸ್ತ, ಪ್ರವಾದಿ ಮಹಮ್ಮದ್ ಪೈಗಂಬರ್, ಭಕ್ತಿ ಭಂಡಾರಿ ಬಸವಣ್ಣ, ಮಹಾತ್ಮ ಗಾಂಧೀಜಿ ಮೊದಲಾದವರನ್ನು ನಾವು ಮಹಾತ್ಮರ ಸಾಲಿನಲ್ಲಿ ಕುಳ್ಳಿರಿಸಿದ್ದೇವೆ. ಅದಕ್ಕೆ ಕಾರಣ ಅವರು ಮಾನವತೆಗೆ ಮಾಡಿದ ದೊಡ್ಡ ಸೇವೆ ಎನ್ನುವುದು ನಿರ್ವಿವಾದದ ಸಂಗತಿ. ಅಂಥವರ ಸಾಲಿಗೆ ಕುದ್ಮುಲ್ ರಂಗರಾವ್ ಅವರ ಹೆಸರು ಕೂಡ ಸೇರ್ಪಡೆಯಾಗುತ್ತದೆ. ಕುದ್ಮುಲ್ ರಂಗರಾವ್ ಅವರು ಮಹಾತ್ಮ ಗಾಂಧೀಜಿ ಮತ್ತು ಅಂಬೇಡ್ಕರ್ ಅವರಿಗಿಂತ ಮುಂಚೆಯೇ, ಅಂದರೆ ನಲವತ್ತು ವರ್ಷಗಳಿಗಳಷ್ಟು ಮೊದಲೇ, ದಲಿತರ ಸೇವೆಯನ್ನು ಮಾಡಿದ ಮಹಾನ್ ವ್ಯಕ್ತಿ. ಅವರ ಜೀವನ ಸಾಕಷ್ಟು ಹೋರಾಟಗಳಿಂದ ತುಂಬಿದೆ.

ಕುದ್ಮುಲ್ ರಂಗರಾವ್ ದಲಿತರ ಮಕ್ಕಳಿಗಾಗಿಯೇ ಶಾಲೆಯನ್ನು ತೆರೆದರು. ದಲಿತರ ಏಳಿಗೆ ಎಂದರೆ ಅವರನ್ನು ವಿದ್ಯಾವಂತರನ್ನಾಗಿ ಮಾಡುವುದು, ಜಾಗೃತರನ್ನಾಗಿ ಮಾಡುವುದು ಎಂದು ಅವರು ಭಾವಿಸಿದ್ದರು. ಕುದ್ಮುಲ್ ರಂಗರಾಯರು ಚಿತ್ರಾಪುರ ಬ್ರಾಹ್ಮಣ ಸಮುದಾಯದವರು. ಇಂದಿಗೂ ಈ ಸಮುದಾಯ ವ್ಯಾಪಕವಾಗಿ ಶಿಕ್ಷಣ ಹಾಗೂ ಉದ್ಯಮ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದೆ. ದಕ್ಷಿಣ ಕನ್ನಡ ಜಿಲ್ಲೆ, ಉತ್ತರಕನ್ನಡ ಜಿಲ್ಲೆ ಹಾಗೂ ಗೋವಾದಲ್ಲಿ ಈ ಸಮುದಾಯದವರು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಈ ಸಮುದಾಯದ ಬಹಳಷ್ಟು ಜನರ ಕರ್ಮಭೂಮಿ, ಮುಂಬೈ.




**ಬಹುರೂಪಿ ಪ್ರಕಾಶನ**
**ಬೆಲೆ: ರೂ.180**
**ಸಂಪರ್ಕಿಸಿ: 70191 82729**

ಕುದ್ಮುಲ್ ರಂಗರಾವ್ 1859 ಜೂನ್ 29ರಂದು ಕಾಸರಗೋಡಿನ ಕುದ್ಮುಲ್ ಎನ್ನುವ ಸಣ್ಣ ಹಳ್ಳಿಯಲ್ಲಿ ಜನಿಸಿದರು. ಆಗ ಈ ಪ್ರದೇಶ ದಕ್ಷಿಣ ಕನ್ನಡ ಜಿಲ್ಲೆಯ ಭಾಗವಾಗಿತ್ತು. ಮಂಗಳೂರಿನಿಂದ ಕೇವಲ ನಲವತ್ತು ಕಿ.ಮೀ. ದೂರದಲ್ಲಿ ಈ ಪ್ರದೇಶವಿದೆ. ದಕ್ಷಿಣ ಕನ್ನಡ ಜಿಲ್ಲೆ ಆಗ ಮದ್ರಾಸ್ ಪ್ರೆಸಿಡೆನ್ಸಿಯ ಭಾಗವಾಗಿತ್ತು.



ಅವರ ತಂದೆ ದೇವಪ್ಪಯ್ಯ. ತಾಯಿ ಗೌರಿ. ತಾಯಿಯ ತಂದೆ ಮುಖ್ಯ ಗುಮಾಸ್ತೆಯ ಹುದ್ದೆಯಲ್ಲಿದ್ದರು. ದೇವಪ್ಪಯ್ಯ ಖಾಸಗಿ ವ್ಯಾಪಾರಿಯ ಬಳಿ ಗುಮಾಸ್ತರಾಗಿದ್ದರು. ಆದರೂ ಗೌರಿಯ ತಂದೆ ಇವರಿಗೆ ತಮ್ಮ ಮಗಳನ್ನು ಕೊಟ್ಟಿದ್ದರು.

ಕುದ್ಮುಲ್ ರಂಗರಾವ್ ಅವರಿಗೆ ಮದುವೆಯಾಗಿ ನಾಲ್ಕು ವರ್ಷವಾಗಿದ್ದಾಗ ಅವರ ತಂದೆ ತೀರಿಕೊಂಡರು. ಮನೆಯಲ್ಲಿ ತುಂಬಾ ಬಡತನ. ತಂಗಿಗೆ ಮದುವೆ ಮಾಡಬೇಕಾಗಿತ್ತು. ಕುದ್ಮುಲ್ ರಂಗರಾವ್ ಅವರು 1880ರಲ್ಲಿ ತಮ್ಮ ಕೊನೆಯ ತಂಗಿಯ ಮದುವೆಯನ್ನು ಉಲ್ಲಾಳದ ರಘುನಾಥಯ್ಯ ಅವರೊಂದಿಗೆ ಮಾಡಿದರು.

ಸಂಸಾರದ ನಿರ್ವಹಣೆಗಾಗಿ ರಂಗರಾವ್ ಮೊದಲಿಗೆ ಶಿಕ್ಷಕ ಹುದ್ದೆಗೆ ಸೇರ್ಪಡೆಯಾಗುತ್ತಾರೆ. ಮೊದಲು ಕಾಸರಗೋಡಿನಲ್ಲಿ ಆ ವೃತಿಯನ್ನು ಆರಂಭಿಸಿದರು. ನಂತರ ಮಂಗಳೂರಿನ ಮುನ್ಸಿಪಲ್ ಶಾಲೆಯಲ್ಲಿ ಅಧ್ಯಾಪಕರಾದರು. ಆಗ ಅವರ ಸಂಬಳ ಎಂಟು ರೂಪಾಯಿ. ದೊಡ್ಡ ಕುಟುಂಬದ ನಿರ್ವಹಣೆಯನ್ನು ಮಾಡಬೇಕಾಗಿತ್ತು. ಖಾಸಗಿಯಾಗಿ ಮೆಟ್ರಿಕ್ಯುಲೇಶನ್ ಪರೀಕ್ಷೆಯನ್ನು ತೆಗೆದುಕೊಂಡು ಪಾಸ್ ಮಾಡಿ ಮಂಗಳೂರಿನ ಸರ್ಕಾರಿ ಕಾಲೇಜಿಗೆ ಸೇರ್ಪಡೆಯಾದರು.

## ಮನೆಯಿಂದಲೇ ಸುಧಾರಣೆ

ಕುದ್ಮುಲ್ ರಂಗರಾವ್ ಮೊದಲಿನಿಂದಲೂ ಅಧ್ಯಯನಶೀಲತೆಯನ್ನು ಬೆಳೆಸಿಕೊಂಡಿದ್ದರು. ಅವರು ಒಳ್ಳೆಯ ಬರಹಗಾರರು. ಅವರು ತಮ್ಮ ಮಕ್ಕಳಿಗೆ ಬರೆದ ಪತ್ರಗಳು ಪ್ರಮುಖ ದಾಖಲೆಯಾಗಿದೆ. ಆ ಪತ್ರಗಳು ಎಲ್ಲ ಮಕ್ಕಳಿಗೂ ಬೋಧಪ್ರದವಾಗಿದೆ ಎಂದರೆ ತಪ್ಪಿಲ್ಲ.

ತಂಗಿಯ ಯಜಮಾನರಾದ ರಘುನಾಥಯ್ಯ ಅವರು ಸ್ವಾತಂತ್ರ ಹೋರಾಟಗಾರರಾಗಿದ್ದರು. ಹಿಂದೂಧರ್ಮದಲ್ಲಿದ್ದ ಕಂದಾಚಾರಗಳನ್ನು ಖಂಡಿಸುತ್ತಿದ್ದರು. ಅವರು ರಂಗರಾವ್ ಅವರ ಎಲ್ಲಾ ಹೋರಾಟಗಳಿಗೂ ಬೆಂಬಲಕೊಟ್ಟರು. ಒಮ್ಮೆ ರಘುನಾಥಯ್ಯ ಅವರು ರಂಗರಾಯರನ್ನು ಬ್ರಹ್ಮಸಮಾಜಕ್ಕೆ ಕರೆದುಕೊಂಡು ಹೋದರು. ಅಲ್ಲಿನ ಉದಾರವಾದಿ ತಾತ್ತ್ವಿಕ ಚಿಂತನೆ ಮತ್ತು ಜಾತಿಭೇದಗಳಿಲ್ಲದ ಧಾರ್ಮಿಕ ಚಟುವಟಿಕೆ ಕುದ್ಮುಲ್ ರಂಗರಾಯರ ಆಸಕ್ತಿಯನ್ನು ಕೆರಳಿಸಿತು. ಇದಕ್ಕಾಗಿ ರಂಗರಾಯರು ಮುಂದೆ ತಮ್ಮ ಮಕ್ಕಳಿಗೆ ಅವರು ಇಂತಹದೇ ಧರ್ಮಕ್ಕೆ ನಡೆದುಕೊಳ್ಳಬೇಕು, ಇಂತಹದೇ ಆಚರಣೆ ಮಾಡಬೇಕೆಂಬ ಕಟ್ಟಳೆಯನ್ನು ವಿಧಿಸಿರಲಿಲ್ಲ. ಆ ವಿಷಯದಲ್ಲಿ ಮಕ್ಕಳಿಗೆ ಸಂಪೂರ್ಣವಾದ ಸ್ವಾತಂತ್ರವನ್ನು ಕೊಟ್ಟಿದ್ದರು.

ಕುದ್ಮುಲ್ ರಂಗರಾಯರ ಪತ್ನಿ ರುಕ್ಮಿಣಿ ಅಮ್ಮ. ಈ ದಂಪತಿಗಳಿಗೆ ಒಟ್ಟು ಏಳು ಮಕ್ಕಳು. ಅದರಲ್ಲಿ ನಾಲ್ಕು ಗಂಡು ಮಕ್ಕಳು ಮೂವರು ಹೆಣ್ಣು ಮಕ್ಕಳು. ಲಲಿತಾಬಾಯಿ ರಾಧಾಬಾಯಿ ಮತ್ತು ಶಾಂತಬಾಯಿ ಎಂಬ ಅವರ ಹೆಣ್ಣುಮಕ್ಕಳು ಕುದ್ಮುಲ್ ರಂಗರಾಯರ ಹೆಸರು ಅಮರವಾಗುವಂತೆ ಬಾಳಿಬದುಕಿದರು. ಆ ಕಾಲದಲ್ಲಿ ಹೆಣ್ಣು ಮಕ್ಕಳು ಶಾಲೆಗೆ ಹೋಗುವಂತಿರಲಿಲ್ಲ. ಆದರೂ ರಂಗರಾಯರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಿದರು.

1904ರಲ್ಲಿ ಕುದ್ಮುಲ್ ರಂಗರಾಯರು ತಮ್ಮ ಮೊದಲನೆಯ ಮಗಳು ಲಲಿತಾಬಾಯಿ ಅವರಿಗೆ ರಾವ್ ಬಹದ್ದೂರ್ ಎನ್. ಸುಬ್ಬರಾವ್ ಅವರ ಜೊತೆ ವಿವಾಹ ಮಾಡಿದರು. ಸುಬ್ಬರಾವ್ ಮತ್ತು ಲಲಿತಾಬಾಯಿ ಅವರು ಕುದ್ಮುಲ್ ರಂಗರಾವ್ ಅವರಿಂದ ಪ್ರೇರಣೆ ಪಡೆದು ಪರಿಶಿಷ್ಟ ಜಾತಿಗೆ ಸೇರಿದ್ದ ವ್ಯಕ್ತಿಯನ್ನು ತಮ್ಮ ಕಾರಿನ ಚಾಲಕನನ್ನಾಗಿ ನೇಮಿಸಿಕೊಂಡಿದ್ದರು. ಲಲಿತಾಬಾಯಿ ಮುಂದೆ ಮಂಗಳೂರಿನ ಪುರಸಭೆಗೆ ಆಯ್ಕೆಯಾದರು. ಅವರು ಆಯ್ಕೆಯಾಗಿ ಮೊದಲ ಮಹಿಳಾ ಜನಪ್ರತಿನಿಧಿ ಎನ್ನುವ ವಿಶೇಷ ಗೌರವಕ್ಕೂ ಪಾತ್ರರಾದರು.

ಎನ್.ಸುಬ್ಬರಾವ್. ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ್ ಆಗಿದ್ದರು. ಇವರ ಮಗ ಎನ್. ಕೃಷ್ಣರಾವ್. ಇವರ ಮಡದಿ ಕಮಲ. ಕೃಷ್ಣರಾವ್ ಚಿಕ್ಕವಯಸ್ಸಿನಲ್ಲಿಯೇ ನಿಧನರಾದರು. ಸಣ್ಣ ವಯಸ್ಸಿನ ಅವರ ಮಡದಿ ಕಮಲ ಅವರಿಗೆ ಮರುವಿವಾಹವಾಗುವಂತೆ ಅವರ ಕುಟುಂಬ ಪ್ರೋತ್ಸಾಹನೀಡಿತು. ಅದರಲ್ಲಿ ಕುದ್ಮುಲ್ ರಂಗರಾಯರ ಪಾತ್ರವಿರುವುದನ್ನು ಮರೆಯುವಂತಿಲ್ಲ. ಆಕೆ ಮುಂದೆ ಕಮಲಾದೇವಿ ಚಟ್ಟೋಪಾಧ್ಯಾಯ ಎಂದು ಪ್ರಖ್ಯಾತರಾದರು. ಭಾರತದ ಗುಡಿಕೈಗಾರಿಕೆ ಮತ್ತು ಲಲಿತಕಲೆಗಳನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿಗೊಳಿಸಿದ ಹಿರಿಮೆ ಕಮಲಾದೇವಿ ಚಟ್ಟೋಪಾಧ್ಯಾಯ ಅವರದು. ಇವರು ಕುದ್ಮುಲ್ ರಂಗರಾಯರು ಮೊಮ್ಮಗನ ಹೆಂಡತಿ ಎನ್ನುವುದು ಹೆಮ್ಮೆಯ ವಿಚಾರ.

1912ರಲ್ಲಿ ಕುದ್ಮುಲ್ ರಂಗರಾಯರು ತಮ್ಮ ಎರಡನೇ ಮಗಳು ರಾಧಾಬಾಯಿ ಅವರನ್ನು ಮೊದಲಿಯಾರ್ ಸಮುದಾಯದ ಡಾ. ಎ. ಸುಬ್ಬರಾಯನ್ ಅವರಿಗೆ ಕೊಟ್ಟು ವಿವಾಹ ಮಾಡಿದರು. ಆ ಕಾಲದಲ್ಲಿ ನಡೆದ ಈ ಅಂತರ್ಜಾತಿ ವಿವಾಹವು ದೊಡ್ಡ ಸಂಗತಿಯಾಗಿತ್ತು. ಈ ವಿವಾಹಕ್ಕೆ ಮಧ್ಯಸ್ಥಿಕೆಯನ್ನು ಸಿ.ಆರ್. ರಾಜಗೋಪಾಲಾಚಾರಿ ಅರ್ಥಾತ್ ರಾಜಾಜಿ ಅವರು ವಹಿಸಿದ್ದರು. ಈ ಮದುವೆಯನ್ನು ಸಾರಸ್ವತ ಬ್ರಾಹ್ಮಣ ಸಮುದಾಯದಲ್ಲಿ ನಡೆದ ಮೊದಲ ಅಂತರ್ಜಾತಿವಿವಾಹವೆಂದು ವರ್ಣಿಸಲಾಗಿದೆ. ಡಾ ಎ. ಸುಬ್ಬರಾಯನ್ ಅವರು ಬಹುದೊಡ್ಡ ಜಮೀನುದಾರರು. ಸ್ವಾತಂತ್ರ್ಯ ಹೋರಾಟಗಾರರು. ಮುಂದೆ ಅವರು ಕೇಂದ್ರದಲ್ಲಿ ಜವಹರಲಾಲ್ ನೆಹರು ಅವರ ಸಚಿವ ಸಂಪುಟದಲ್ಲಿ ಸಚಿವರಾಗಿದ್ದರು. ನಂತರ ಮುಂಬೈನ ಗೌವರ್ನರ್ ಕೂಡ ಆಗಿದ್ದರು. ಆ ಹುದ್ದೆಯಲ್ಲಿದ್ದಾಗಲೇ ಅವರು ನಿಧನರಾದರು.

ರಾಧಾಬಾಯಿ ಮತ್ತು ಸುಬ್ಬರಾಯನ್‌ಗೆ ನಾಲ್ವರು ಮಕ್ಕಳು. ಅದರಲ್ಲಿ ಮೂರನೆಯ ಮಗ ಸುರೇಂದ್ರ ಮೋಹನ ಕುಮಾರಮಂಗಳಂ ಅವರು 1973ರಲ್ಲಿ ಕೇಂದ್ರ ಸಚಿವರಾಗಿದ್ದರು. ಅನಂತರದ ವರ್ಷಗಳಲ್ಲಿ ಅವರ ಮಗ ರಂಗರಾಜನ್ ಕುಮಾರಮಂಗಳಂ ಸಹ ಕೇಂದ್ರ ಸಚಿವರಾಗಿದ್ದರು. ಅವರ ಸೋದರಿ ಪಾರ್ವತಿ ಕೃಷ್ಣನ್‌ನವರು ಕೊಯಮತ್ತೂರಿನಿಂದ ಎರಡು ಸಲ ಕಮ್ಯುನಿಸ್ಟ್ ಪಾರ್ಟಿಯ ಮೂಲಕ ಲೋಕಸಭಾ ಸದಸ್ಯರಾಗಿದ್ದರು. ಹೀಗೆ ಕುದ್ಮುಲ್ ರಂಗರಾಯರು ಸಮಾಜಸುಧಾರಣೆಗಳನ್ನು ತಮ್ಮ ಮನೆಯಿಂದಲೇ ಪ್ರಾರಂಭ ಮಾಡಿದ್ದರು. ಇಂದಿಗೂ ಅವರ ಸಂತತಿಯವರು ಜನಪರವಾಗಿ ಕೆಲಸ ಮಾಡುವ ನಿಷ್ಠೆಯನ್ನು ಹೊಂದಿದ್ದಾರೆ.

## ದಲಿತರ ಏಳಿಗ್ಗೆ ಕಂಡುಕೊಂಡ ಮಾರ್ಗ

ಕುದ್ಮುಲ್ ರಂಗರಾಯರು ಶಿಕ್ಷಕ ವೃತ್ತಿಯನ್ನು ತೊರೆದು ವಕೀಲಿ ವೃತ್ತಿಯನ್ನು ಆರಿಸಿಕೊಂಡರು. ಮದ್ರಾಸ್ ಮತ್ತು ಮಂಗಳೂರುಗಳಲ್ಲಿ

ಅವರು ವಕೀಲರಾಗಿ ಕೆಲಸ ಮಾಡಿದರು. ಅವರು ಬಡವರ ಕೇಸ್‌ಗಳನ್ನು ಮಾತ್ರ ತೆಗೆದುಕೊಳ್ಳುತ್ತಿದ್ದರು. 1896ರ ಹೊತ್ತಿಗೆ ಕುದ್ಮುಲ್ ರಂಗರಾಯರು ಮಂಗಳೂರು ಮುನ್ಸಿಫ್ ಕೋರ್ಟ್‌ನಲ್ಲಿ ಪ್ರಸಿದ್ಧರಾಗಿದ್ದರು.

ಕುದ್ಮುಲ್ ರಂಗರಾಯರು ಮೊದಲು ತಮ್ಮ ಆಸಕ್ತಿಯನ್ನು ಶಿಕ್ಷಣದ ಕಡೆಗೆ ಹರಿಸಿದರು. ಪರಿಶಿಷ್ಟ ಜಾತಿ ಮತ್ತು ವರ್ಗಕ್ಕೆ ವಿಮೋಚನೆ ದೊರೆಯಬೇಕಾದರೆ ಅವರು ಸುಶಿಕ್ಷಿತರಾಗಬೇಕು, ವಿದ್ಯೆ ಅವರಲ್ಲಿ ಜಾಗೃತಿ ತರುತ್ತದೆ ಎಂದು ಕುದ್ಮುಲ್ ರಂಗರಾಯರು ಭಾವಿಸಿದ್ದರು. ಮಂಗಳೂರಿನ ಕಂಕನಾಡಿನಲ್ಲಿ ಅವರು ದಲಿತ ಮಕ್ಕಳಿಗಾಗಿ ಪ್ರಾಥಮಿಕ ಶಾಲೆಯನ್ನು ತೆರೆದರು. 1892ರಲ್ಲಿ ಕುದ್ಮುಲ್ ರಂಗರಾಯರು ದಲಿತರಿಗಾಗಿ ಉರ್ವಚಿಲಿಂಬಿ ಎನ್ನುವಲ್ಲಿ ಶಾಲೆ ತೆರೆದರು. ತಮ್ಮ ಮಕ್ಕಳಂತೆಯೇ ದಲಿತರ ಮಕ್ಕಳು ಶಾಲೆಗೆ ಬರುವುದನ್ನು ಸಹಿಸದ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಅವರಿಗೆ ಬಹಳ ತೊಂದರೆಕೊಟ್ಟರು. ಮಕ್ಕಳು ಶಾಲೆಗೆ ಬರದಂತೆ ವಿವಿಧ ಅಡೆತಡೆಗಳನ್ನು ನಿರ್ಮಿಸಿದರು. ಆ ಜನರು ಒಮ್ಮೆ ಬೇಕೆಂದೇ ಅವರ ಶಾಲೆಯ ಬಾಗಿಲ ಬಳಿ ಮಲದ ರಾಶಿಯನ್ನು ಸುರಿದರು. ಇವುಗಳಿಂದಾಗಿ ಆ ಶಾಲೆಯನ್ನು ಮುಚ್ಚಬೇಕಾಯಿತು.

1895ರ ಜನವರಿಯಲ್ಲಿ ಕುದ್ಮುಲ್ ರಂಗರಾಯರು ಮಂಗಳೂರಿನ ಸಮೀಪದ ಬೋಳೂರಿನಲ್ಲಿ ದಲಿತ ಗಂಡುಮಕ್ಕಳಿಗಾಗಿ ಮತ್ತೊಂದು ಶಾಲೆಯನ್ನು ತೆರೆದರು. ಆ ಶಾಲೆಗಳಿಗೆ ಅಧ್ಯಾಪಕರನ್ನು ನೇಮಿಸಿಕೊಳ್ಳುವುದೇ ಬಹಳ ಕಷ್ಟವಾಗಿತ್ತು. ಸಂಬಳಕೊಟ್ಟರೂ ದಲಿತರ ಮಕ್ಕಳಿಗೆ ಪಾಠಹೇಳುವ ಅಧ್ಯಾಪಕರು ದೊರೆಯುತ್ತಿರಲಿಲ್ಲ. ಶಿಕ್ಷಣದ ಜೊತೆಗೆ ಈ ಮಕ್ಕಳಿಗೆ ವೃತ್ತಿಕೌಶಲವನ್ನೂ ಕಲಿಸಬೇಕೆಂದುಕೊಂಡಿದ್ದ ಕುದ್ಮುಲ್ ರಂಗರಾಯರು ಶಿಕ್ಷಣದ ಜೊತೆ ಬಡಗಿ, ನೇಯ್ಗೆ, ಟೈಲರಿಂಗ್, ರೇಷ್ಮೆಹುಳುಗಳ ಸಾಕಾಣಿಕೆ ಮೊದಲಾದ ವೃತ್ತಿಗಳಲ್ಲಿ ದಲಿತರ ಮಕ್ಕಳಿಗೆ ತರಬೇತಿಗಳನ್ನು ನೀಡಿಸಿದರು.

1897ರಲ್ಲಿ ಕೊಡಿಯಾಲಬೈಲಿನಲ್ಲಿ 'ಡಿಪ್ರೆಸ್ಡ್ ಕ್ಲಾಸ್ ಮಿಷನ್'ನ್ನು (ಡಿ.ಸಿ.ಎಂ) ಪ್ರಾರಂಭಿಸಿದರು. ದಲಿತರ ಸರ್ವಾಂಗೀಣ ಅಭಿವೃದ್ಧಿಗೆ ಜನ್ಮತಾಳಿದ ಸಂಸ್ಥೆ ಅದು. ಈ ಸಂಸ್ಥೆಗೆ ಧ್ವಜವೊಂದನ್ನು ಕುದ್ಮುಲ್ ರಂಗರಾಯರು ರೂಪಿಸಿದರು. ಅದರಲ್ಲಿದ್ದ ಧ್ಯೇಯವಾಕ್ಯ ಹೀಗಿತ್ತು: 'ದಲಿತರ ಉದ್ಧಾರ ದೇಶದ ಉದ್ಧಾರ'.

1923ರಲ್ಲಿ ಕುದ್ಮುಲ್ ರಂಗರಾಯರು 'ಕೋರ್ಟ್ ಹಿಲ್ ಆದಿದ್ರಾವಿಡ ಸಹಕಾರಿ ಸಂಘ' ಎನ್ನುವ ಸಹಕಾರ ಸಂಸ್ಥೆಯೊಂದನ್ನು ತಮ್ಮ ಧ್ಯೇಯೋದ್ದೇಶಗಳ ಅನುಷ್ಠಾನಕ್ಕಾಗಿ ಪ್ರಾರಂಭಿಸಿದರು. ಮುಂದೆ ಮಹಾತ್ಮ ಗಾಂಧೀಜಿ ಕೂಡ ಸಹಕಾರ ತತ್ತ್ವದ ಮೂಲಕವೇ ಸರ್ವಾಂಗೀಣ ಪ್ರಗತಿಯಾಗಬೇಕೆಂದು ಬಯಸಿದ್ದುದನ್ನು ನಾವು ನೆನಪಿಸಿಕೊಳ್ಳಬೇಕು. ಪ್ರಾರಂಭದಲ್ಲಿ ಅಡಚಣೆಗಳು ಬಂದರೂ ಕುದ್ಮುಲ್ ರಂಗರಾಯರು ತಮ್ಮ ಹಠವನ್ನು ಬಿಡದೆ ಸತತವಾಗಿ ಪ್ರಯತ್ನಶೀಲರಾಗಿದ್ದ ಕಾರಣ ಅನೇಕ ಕಡೆ ಶಾಲೆಗಳು ಪ್ರಾರಂಭವಾದವು. ದಲಿತರ ಮಕ್ಕಳು ಶಾಲೆಗೆ ಬರತೊಡಗಿದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನೇಕ ಶಾಲೆಗಳು ಪ್ರಾರಂಭವಾದವು.

### ಹರಿದು ಬಂದ ನೆರವು

ಕುದ್ಮುಲ್ ರಂಗರಾಯರ ಶೈಕ್ಷಣಿಕ ಸೇವೆಗೆ ಅನೇಕ ಮೂಲಗಳಿಂದ ಸಹಾಯವು ಹರಿದು ಬಂದುದನ್ನು ಕಾಣಬಹುದು. ಇವರ ಸಾಮಾಜಿಕ ಕೆಲಸಗಳಿಗೆ ಪ್ರೋತ್ಸಾಹ ಕೊಟ್ಟವರಲ್ಲಿ ಕಾರ್ನಾಡ್ ಸದಾಶಿವರಾಯರು ಪ್ರಮುಖರು. ಅಮೆರಿಕಾದ ಮಿಷನರಿಯ ರೆವರೆಂಡ್ ಜಸ್ಟಿನ್ ಆಬ್ಬೆಂಡ್ ಎನ್ನುವವರು ಕುದ್ಮುಲ್ ರಂಗರಾವ್ ಅವರ ಸಾಮಾಜಿಕ ಕೆಲಸಗಳನ್ನು ಮೆಚ್ಚಿ ವಾರ್ಷಿಕ ಐವತ್ತು ರೂಗಳನ್ನು ಕಳಿಸುತ್ತಿದ್ದರು. ಅವರು ತಮ್ಮ ವಿಲ್‌ನಲ್ಲಿ ಕುದ್ಮುಲ್ ರಂಗರಾಯರ ಸಂಸ್ಥೆಗಾಗಿ ಸಾವಿರ ಅಮೆರಿಕನ್ ಡಾಲರ್‌ಗಳನ್ನು ದೇಣಿಗೆಯಾಗಿ ನೀಡಿದ್ದರು.

1930ರಲ್ಲಿ ಬರೋಡದಲ್ಲಿ ಮೆಡಿಕಲ್ ಆಫೀಸರ್ ಆಗಿದ್ದ ಬೆನೆಗಲ್ ರಾಮಕೃಷ್ಣರು ಈ ಸಂಸ್ಥೆಗೆ ನಾಲ್ಕು ಸಾವಿರ ರೂಪಾಯಿಗಳನ್ನು ದಾನವಾಗಿ ಕೊಟ್ಟಿದ್ದರು. ಶ್ರೀಮತಿ ನಾರಾಯಣರಾವ್ ಬಾಂಬೆ ಇವರು 2,500 ರೂಗಳನ್ನು ಈ ಸಂಸ್ಥೆಗೆ ಕೊಟ್ಟಿದ್ದರು. ವಿಟ್ಸರ್ಡ್ ಎನ್ನುವ ಐಸಿಎಸ್ ಅಧಿಕಾರಿ ವಾರ್ಷಿಕ ಮೂವತ್ತು ರುಪಾಯಿಗಳನ್ನು ಈ ಸಂಸ್ಥೆಗೆ ಕೊಡುತ್ತಿದ್ದರು. ಅವರು ತಾವು ಇಂಗ್ಲೆಂಡಿಗೆ ಹೋದ ಅನಂತರ 300 ಪೌಂಡ್‌ಗಳನ್ನು ಈ ಸಂಸ್ಥೆಗೆ ಕೊಡಬೇಕೆಂದು ವಿಲ್ ಬರೆದಿದ್ದರು. ಫೋರ್ಡ್ ಕಾರುಗಳ ನಿರ್ಮಾಪಕರಾದ ಹೆನ್ರಿ ಫೋರ್ಡ್ ಸಹ ಕುದ್ಮುಲ್ ರಂಗರಾಯರು ಸ್ಥಾಪಿಸಿದ ಸಂಸ್ಥೆಗೆ ಹಣಕಾಸು ನೆರವು ನೀಡಿದ್ದರೆಂದು ತಿಳಿದುಬರುತ್ತದೆ. ತಮಗೆ ಹಣಕಾಸಿನ ತೊಂದರೆಯಾದಾಗ ಕುದ್ಮುಲ್ ರಂಗರಾಯರು ಯಾರನ್ನಾದರೂ ಕೇಳಿದರೆ ತಕ್ಷಣ ಅವರು ನೆರವು ನೀಡುತ್ತಿದ್ದರು.

19ನೆಯ ಶತಮಾನದಲ್ಲಿ ಸಂವಹನಕ್ರಿಯೆ ಉತ್ತಮವಾಗಿರದಿದ್ದ ಸಂದರ್ಭದಲ್ಲಿಯೂ ಕುದ್ಮುಲ್ ರಂಗರಾಯರು ತಮ್ಮ ಸಂಸ್ಥೆಗೆ ಸಂಪನ್ಮೂಲವನ್ನು ಸಂಗ್ರಹಿಸುತ್ತಿದ್ದುದನ್ನು ನೋಡಿದರೆ ಅವರ ಜನಪ್ರಿಯತೆ ಯಾವ ಪ್ರಮಾಣದಲ್ಲಿತ್ತೆಂಬುದು ತಿಳಿಯುತ್ತದೆ. ಈ ಎಲ್ಲ ಸಂಪನ್ಮೂಲವನ್ನು ಅವರು ಸಂಸ್ಥೆಯ ಏಳಿಗೆಗೆ ಮಾತ್ರ ಬಳಸಿದರು ಎನ್ನುವುದು ಗಮನಾರ್ಹವಾದ ವಿಚಾರ. ಅವರ ಸಾಮಾಜಿಕ ಸೇವೆಯನ್ನು ಗುರುತಿಸಿ ಬ್ರಿಟಿಷ್ ಸರ್ಕಾರ ಇವರಿಗೆ 'ರಾವ್ ಬಹದ್ದೂರ್' ಪ್ರಶಸ್ತಿಯನ್ನು ಕೊಡುತ್ತೇವೆ ಎಂದಾಗ ಕುದ್ಮುಲ್ ರಂಗರಾವ್ ನಮ್ರವಾಗಿ ಅದನ್ನು ತಿರಸ್ಕರಿಸಿದರು.

### ಕೊರಗರ ಆಪ್ತ ಬಂಧು

ಕುದ್ಮುಲ್ ರಂಗರಾಯರಿಗೆ ಕೊರಗರ ವಿಚಾರದಲ್ಲಿ ವಿಶೇಷವಾದ ಮಮತೆಯಿತ್ತು. ಕೊರಗರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಂಡುಬರುವ ಪರಿಶಿಷ್ಟ ವರ್ಗದವರು. ಒಂದು ಕಾಲದಲ್ಲಿ ಅವರು ಈ ಪ್ರಾಂತ್ಯದ ಅರಸರಾಗಿದ್ದರು. ಇವರ ದೊರೆ ಹಿಭಾಷಿಕನ ಸಂಗತಿ ಅವರ ಜಾನಪದದಲ್ಲಿ ಬರುತ್ತವೆ. ಕೆಲವು ಐತಿಹಾಸಿಕ ಕಾರಣಗಳಿಗಾಗಿ ಕೊರಗರು ನಾಡನ್ನು ತೊರೆದು ಕಾಡಿಗೆ ಹೋದರು. ಆಗ ಅವರ ಹಣಕಾಸಿನ ಪರಿಸ್ಥಿತಿ ಬಹಳ ಶೋಚನೀಯವಾಗಿತ್ತು. ಅವರಿಗೆ ಧರಿಸಲು ಬಟ್ಟೆ ಕೂಡ ಇರುತ್ತಿರಲಿಲ್ಲ. ಕಾಡಿನಲ್ಲಿ ಗೆಡ್ಡೆ–ಗೆಣಸನ್ನು ತಿಂದುಕೊಂಡು ಹಾಗೂ ಸಿಕ್ಕಿದ ಪ್ರಾಣಿಗಳನ್ನು ಬೇಟೆಯಾಡಿ ಜೀವಿಸುತ್ತಿದ್ದರು.

ಮೇಲ್ವರ್ಗದವರಲ್ಲಿ ಕೊರಗರು ತಮ್ಮ ಎಂಜಲು ತಿಂದರೆ ಅದೃಷ್ಟ ಕುಲಾಯಿಸುತ್ತದೆ ಎನ್ನುವ ನಂಬಿಕೆ ಈ ಜಿಲ್ಲೆಯಲ್ಲಿ ವ್ಯಾಪಕವಾಗಿ ಬೆಳೆದಿತ್ತು. ಅದಕ್ಕಾಗಿ ಮೇಲ್ವರ್ಗದವರು ಬಸರಿಯ ಸೀಮಂತ, ತಿಥಿಯಂತಹ ಸಂದರ್ಭಗಳಲ್ಲಿ ಕೊರಗರನ್ನು ಹುಡುಕಿ ಅವರಿಗೆ ತಮ್ಮ ಎಂಜಲನ್ನು ನೀಡುತ್ತಿದ್ದರು.

ಕೊರಗರು ಸ್ವಾಭಿಮಾನದಿಂದ ಬದುಕಬೇಕೆಂಬ ಕನಸನ್ನು ಕಂಡಿದ್ದ ಕುದ್ಮುಲ್ ರಂಗರಾಯರು ಜಿಲ್ಲೆಯಾದ್ಯಂತ ಸಂಚರಿಸಿ ಎಂಜಲು ತಿನ್ನದಂತೆ ಹಾಗೂ ಭಿಕ್ಷೆ ಬೇಡದಂತೆ ಕೊರಗರಲ್ಲಿ ಜಾಗೃತಿಯನ್ನು ಉಂಟುಮಾಡಿದರು. ಉಡುಪಿ, ಪುತ್ತೂರು ಮೊದಲಾದ ಕಡೆ ಸರ್ಕಾರಕ್ಕೆ ಮನವಿ ಸಲ್ಲಿಸಿ ಸರ್ಕಾರಿ ಭೂಮಿಯನ್ನು ಅವರಿಗೆ ಕೊಡಿಸಿ ಜಮೀನಿನ ಪಕ್ಕದಲ್ಲಿಯೇ ಮನೆ ಕಟ್ಟಿಕೊಳ್ಳಲು ಅವರಿಗೆ ಸಹಾಯಮಾಡಿದರು. ಅವರಿಗಾಗಿಯೇ ಬಾವಿಗಳನ್ನು ತೋಡಿಸಿದರು.

ಒಮ್ಮೆ ಕುದ್ಮುಲ್ ರಂಗರಾಯರು ಒಂದು ಜೈಲಿಗೆ ಭೇಟಿ ಕೊಟ್ಟಿದ್ದರು. ಅಲ್ಲಿದ್ದ ಕೈದಿಗಳನ್ನು ಸುಧಾರಿಸಬೇಕು, ಅವರ ಮನಸ್ಸನ್ನು ಪರಿವರ್ತನೆ ಮಾಡಬೇಕು ಎನ್ನುವ ಉದ್ದೇಶ ಅವರಲ್ಲಿತ್ತು. ರೋಮನ್ ಕ್ಯಾಥೋಲಿಕ್ ಸಮುದಾಯ ಮದ್ಯಪಾನದ ಚಟದಿಂದ ಅಧಃಪತನ ಹೊಂದುತ್ತಿದ್ದಾರೆ ಎನ್ನುವ ವಿಚಾರ ಅವರಿಗೆ ಅಲ್ಲಿ ತಿಳಿಯಿತು. ಅದಕ್ಕಾಗಿ ಕುದ್ಮುಲ್ ರಂಗರಾಯರು ಮದ್ಯಪಾನ ವಿರೋಧಿ ಅಭಿಯಾನವನ್ನು ಕೈಗೊಂಡರು.

### ಸ್ತ್ರೀಯರಿಗೆ ನ್ಯಾಯ ದೊರಕಿಸಿ ಕೊಡುವ ಪ್ರಯತ್ನ

ಕುದ್ಮುಲ್ ರಂಗರಾಯರ ಆಸಕ್ತಿ ವಿವಿಧ ಕ್ಷೇತ್ರಗಳಲ್ಲಿತ್ತು. ವಿಶೇಷವಾಗಿ, ಶೋಷಣೆಗೊಳಗಾದ ಸ್ತ್ರೀ ಸಮುದಾಯಕ್ಕೆ ನ್ಯಾಯವನ್ನು ದೊರಕಿಸಿಕೊಡಬೇಕು ಎಂಬ ತುಡಿತ ಅವರಲ್ಲಿತ್ತು. ಸಾರಸ್ವತ ಬ್ರಾಹ್ಮಣ ಸಮಾಜದಲ್ಲಿ ಸಣ್ಣ ವಯಸ್ಸಿನ ವಿಧವೆಯೊಬ್ಬರಿಗೆ ಕೃಷ್ಣ ಎನ್ನುವ ಯುವಕನೊಡನೆ ಮರುಮದುವೆ ಮಾಡಿಸಿದ ಹೆಗ್ಗಳಿಕೆ ಕುದ್ಮುಲ್ ರಂಗರಾಯರದಾಗಿತ್ತು. ಹೆಣ್ಣಿನ ಮನೆಯವರನ್ನು ಒಪ್ಪಿಸಿ ಅವರು ಈ ಕೆಲಸವನ್ನು ನೆರವೇರಿಸಿದ್ದರು. ಸ್ವತಃ ಅವರ ಮೊಮ್ಮಗನ ಸೊಸೆ ಮರುಮದುವೆ ಮಾಡಿಕೊಂಡಾಗಲೂ ಕುಮ್ಮಲ್ ರಂಗರಾಯರು ಅದನ್ನು ಸ್ವಾಗತಿಸಿದ್ದರು.

ಅನಂತರ ಕುದ್ಮುಲ್ ರಂಗರಾಯರ ದೃಷ್ಟಿ ದೇವದಾಸಿಯರ ಕಡೆಗೆ ತಿರುಗಿತು. ದೇವಸ್ಥಾನಗಳಲ್ಲಿ ಆ ಮಹಿಳೆಯರು ತಮ್ಮ ಸೇವೆ ಸಲ್ಲಿಸುತ್ತಿದ್ದುನ್ನು ಕುಮ್ಮಲ್ ರಂಗರಾಯರು ನೋಡಿದ್ದರು. ಈ ಪದ್ಧತಿಯ ವಿರುದ್ಧ ಅವರು ಸಾಕಷ್ಟು ಜನಜಾಗೃತಿಯನ್ನುಂಟುಮಾಡಿದರು. ಭಿತ್ತಿಪತ್ರ ಮತ್ತು ಕರಪತ್ರಗಳನ್ನು ಮುದ್ರಿಸಿ ಹಂಚಿದ್ದರು. ದೇವದಾಸಿಯರನ್ನು ಭೇಟಿ ಮಾಡಿ ಅವರ ಜೀವನೋಪಾಯಕ್ಕೆ ಬೇರೆ ವೃತ್ತಿಯನ್ನು ಅನುಸರಿಸುವಂತೆ ಅವರ ಮನವೊಲಿಸುವ ಪ್ರಯತ್ನ ಮಾಡಿದ್ದರು.

ಕುದ್ಮುಲ್ ರಂಗರಾಯರ ಸೇವೆಯನ್ನು ಸ್ವತಃ ಮಹಾತ್ಮ ಗಾಂಧೀಜಿಯವರೇ ಮೆಚ್ಚಿದ್ದರು. 1932ರಲ್ಲಿ ಮಂಗಳೂರಿಗೆ ಭೇಟಿ ಕೊಟ್ಟಿದ್ದ ಮಹಾತ್ಮ ಗಾಂಧೀಜಿಯವರು ಕುದ್ಮುಲ್ ರಂಗರಾಯರು ಸ್ಥಾಪಿಸಿದ್ದ ಶೇಡಿಗುಡ್ಡೆ ಡಿ.ಸಿ.ಎಂ. ಶಾಲೆಗೆ ಭೇಟಿ ಕೊಟ್ಟಿದ್ದರು. ಅವರಿಗೆ ಕುದ್ಮುಲ್ ರಂಗರಾಯರ ಸಾಧನೆಯನ್ನು ಪರಿಚಯಿಸಲಾಯಿತು. ಅಷ್ಟರಲ್ಲಾಗಲೇ ಕುದ್ಮುಲ್ ರಂಗರಾಯರು ನಿಧನರಾಗಿ ನಾಲ್ಕು ವರ್ಷಗಳು ಕಳೆದಿದ್ದವು. ಮಹಾತ್ಮ ಗಾಂಧೀಜಿ ಕುದ್ಮುಲ್ ರಂಗರಾಯರನ್ನು ಕುರಿತು ಹೇಳಿರುವ ಈ ಮಾತುಗಳು "ಕುದ್ಮುಲ್ ರಂಗರಾಯರು ಒಬ್ಬ ಆದರ್ಶಪುರುಷರು. ಅವರ ಸೇವೆ, ಮಾನವೀಯತೆ ಹಾಗೂ ದೂರದೃಷ್ಟಿ ನನಗೆ ಆದರ್ಶ. ಅವರು ನನಗೆ ಗುರುಸಮಾನ" ರಾಯರ ವ್ಯಕ್ತಿತ್ವವನ್ನು ನಮ್ಮ ಕಣ್ಮುಂದೆ ತರುತ್ತದೆ.

ಕುದ್ಮುಲ್ ರಂಗರಾಯರು ತಮ್ಮ ಜೀವನವನ್ನು ಅತ್ಯಂತ ಕೆಳವರ್ಗದ ಜನರ ಒಳಿತಿಗಾಗಿ ಮೀಸಲಾಗಿಟ್ಟಿದ್ದದ್ದು ಐತಿಹಾಸಿಕವಾಗಿ ಬಹಳ ಮುಖ್ಯವಾದ ವಿಚಾರ. ಮುಂದೆ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಾತ್ಮ ಗಾಂಧೀಜಿಯವರು ಕುದ್ಮುಲ್ ರಂಗರಾಯರ ಆದರ್ಶಗಳನ್ನಿಟ್ಟುಕೊಂಡು ಜನಜಾಗೃತಿ ಮಾಡಿ ಹೋರಾಟವನ್ನು ರೂಪಿಸಿ ದೇಶಕ್ಕೆ ಸ್ವಾತಂತ್ರವನ್ನು ಗಳಿಸಿಕೊಟ್ಟರು. ಅದರಂತೆ ಭಾರತೀಯ ಸಮಾಜದಲ್ಲಿ ಅಸ್ಪೃಶ್ಯತೆಯ ನಿವಾರಣೆ ಮತ್ತು ದಲಿತರ ಉದ್ಧಾರ ಅತ್ಯಂತ ತುರ್ತಿನ ವಿಚಾರವೆಂಬುದನ್ನು ಸರ್ಕಾರ ಮತ್ತು ಸಮಾಜಕ್ಕೆ ಅವರು ಮನವರಿಕೆ ಮಾಡಿಕೊಟ್ಟರು.

### ಕುದ್ಮುಲ್‌ರ ಕನಸು

ಡಾ. ಬಿ.ಆರ್. ಅಂಬೇಡ್ಕರ್ ಅವರು ಕುದ್ಮುಲ್ ರಂಗರಾಯರಂತೆ ದಲಿತರ ನ್ಯಾಯೋಚಿತವಾದ ಹಕ್ಕು ಬಾಧ್ಯತೆಗಳಿಗಾಗಿ ಹೋರಾಟಮಾಡಿದರು ಮತ್ತು ಸ್ವಾತಂತ್ರ್ಯಾನಂತರ ತಮ್ಮ ಕನಸುಗಳಿಗೆ ಶಾಸನಬದ್ಧ ಮಾನ್ಯತೆಯನ್ನು ತಾವು ರಚಿಸಿದ ಸಂವಿಧಾನದಲ್ಲಿ ಅವರು ನೀಡಿದರು ಎಂಬುದು ಮಹತ್ತ್ವದ ವಿಚಾರ. ಮಹಾತ್ಮ ಗಾಂಧೀಜಿ ಮತ್ತು ಡಾ. ಬಿ.ಆರ್. ಅಂಬೇಡ್ಕರ್ ಇಬ್ಬರಿಗೂ ಕುದ್ಮುಲ್ ರಂಗರಾಯರು ಪ್ರೇರಣಾಶಕ್ತಿಯಾಗಿದ್ದುದನ್ನು ನಾವು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕು. ಕುದ್ಮುಲ್ ರಂಗರಾಯರು ತಮ್ಮ ಬದುಕಿನ ಕೊನೆಯಲ್ಲಿ ಹೇಳಿದ ಕೆಲವು ಮಾತುಗಳು ಅವರ ಮನೋಧರ್ಮವನ್ನು ತೋರಿಸುತ್ತದೆ. ಆ ಮಾತುಗಳು ಹೀಗಿವೆ "ದಲಿತ ಸಮುದಾಯದ ಹುಡುಗನೊಬ್ಬ ನನ್ನ ಶಿಕ್ಷಣ ಸಂಸ್ಥೆಯಲ್ಲಿ ಶಿಕ್ಷಣಪಡೆದು ಸರ್ಕಾರಿ ಕಾರಿನಲ್ಲಿ ತನ್ನ ಹಳ್ಳಿಗೆ ಪಯಣಿಸುವಾಗ ಆ ಕಾರಿನಿಂದ ಎದ್ದ ಧೂಳು ನನ್ನ ತಲೆಯನ್ನು ಸ್ಪರ್ಶಿಸಿದರೆ ನನ್ನ ಬದುಕು ಪಾವನವಾಯಿತು, ನನಗೆ ನೆಮ್ಮದಿ ದೊರಕಿತು ಎಂದು ಭಾವಿಸುತ್ತೇನೆ".



## ಸಾವಿನಲ್ಲೂ ಆದರ್ಶ

**ಇಂತಹ ಮಹಾಚೇತನ 1928 ಜನವರಿ 30ರಂದು ತಮ್ಮ 69ನೆಯ ವಯಸ್ಸಿನಲ್ಲಿ ನಿಧನರಾದರು. ಅವರು ಬಯಸಿದ್ದಂತೆಯೇ ಅವರ ಪಾರ್ಥಿವ ಶರೀರವನ್ನು ದಲಿತರು ಸಶ್ಮಾನಕ್ಕೆ ಹೊತ್ತುಕೊಂಡು ಹೋದರು ಮತ್ತು ಅವರುಗಳೇ ಅಂತ್ಯಸಂಸ್ಕಾರವನ್ನೂ ಮಾಡಿದರು.**

**ಕುದ್ಮುಲ್ ರಂಗರಾಯರ ನಿಧನದಿಂದ ನೂರಾರು ದಲಿತ ಮಕ್ಕಳು ದುಃಖತಪ್ತರಾದರು. ಈಗಲೂ ಅವರ ಸಮಾಧಿಸ್ಥಳಕ್ಕೆ ಸಾಮಾಜಿಕ ನ್ಯಾಯದ ಬಗ್ಗೆ ಬದ್ಧತೆಯಿರುವ ಜನ ಭೇಟಿ ಕೊಟ್ಟು ತಮ್ಮ ನಮನಗಳನ್ನು ಆ ಮಹಾನ್ ವ್ಯಕ್ತಿಗೆ ಸಲ್ಲಿಸುತ್ತಾರೆ.**

Printed and Published by **Shridevi Media Center,** Lingapura, NH 4, Sira Road, Tumakuru - 572106, Mob: 94480 82844 and
Printed at **Maruthi Printing Press,** No.90/6-1. 1st cross, Vittal Nagar West, Near Marvel Apartment, Bengaluru-560026. Editor: **Dr M R Hulinaykar**